

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ


Volume 33 : Issue 4 KARKAN2012/45587 BENGALURU JAN-MAR 2021 Price Rs.10/-



















## ಪ್ರತಿಭೆಗೆ ಸಂದ ಬಹುಮಾನ




**ಭೃಗುವಾಣಿಯ ಸಮಸ್ತ ಓದುಗರಿಗೆ ಪ್ಲವ ಸಂವತ್ಸರದ ಶುಭಾಶಯಗಳು**

*With best compliments from :*

# TEDMAG
# ENGINEERING & MANAGEMENT CONSULTANTS (P) LTD.


**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**


- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 33 ಸಂಚಿಕೆ 04

ಅಧ್ಯಕ್ಷರು :
ವಿಜಯಲಕ್ಷ್ಮಿ ಭಟ್ ಎಸ್.

ಕಾರ್ಯದರ್ಶಿ :
ಎಂ. ಕೆ. ಗುರುಮೂರ್ತಿ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಡಿ. ಶರತ್ ಕುಮಾರ ಭಟ್
ಡಾ. ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ
ಎಂ. ಕೃಷ್ಣ ಪ್ರಸಾದ್

ಸಲಹೆಗಾರರು :
ಶ್ರೀ ಎಸ್. ಹರಿದಾಸ ಉಪಾಧ್ಯ

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ
ಮಟ್ಟಿ ರಾಮಚಂದ್ರರಾವ್

ವಿಳಾಸ :
ಆನಂದ ಬಳಗ
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org



# ಅಧ್ಯಕ್ಷರ ಮಾತು......

ಪ್ರಿಯ ಸದಸ್ಯ ಬಾಂಧವರೇ,

ಹಳೆ ಸಂವತ್ಸರ ಶಾರ್ವರಿ ಮುಗಿದು ಹೊಸ ಸಂವತ್ಸರ ಪ್ಲವ ಆರಂಭವಾಗಿದೆ. ನಿಮಗೆ ಗೊತ್ತಿರುವ ಹಾಗೆ, ಕಳೆದ ಸಂವತ್ಸವರವು ವಿಶ್ವವನ್ನೇ ನಡುಗಿಸಿದ ಕೋವಿಡ್ ಮಹಾಮಾರಿಯ ಅಟ್ಟಹಾಸದಿಂದಾಗಿ ಒಂದು ತರಹದ ಶೂನ್ಯ ವರ್ಷವಾಗಿ ಪರಿಣಮಿಸಿದೆ. ಬಳಗದ ಪಾಲಿಗಂತು ಇದು ಹೆಚ್ಚು ಸತ್ಯವಾದ ವಿಚಾರ. ಕಳೆದ ಹಲವಾರು ವರ್ಷಗಳಿದ ವರ್ಷಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳು ಬಳಗದಲ್ಲಿ ನಡೆಯುತ್ತಿದ್ದು, ಈ ವರ್ಷ ಕೆಲವು ಸೀಮಿತ ಕಾರ್ಯಕ್ರಮಗಳಿಗೆ ಸಮಾಧಾನಪಡುವಂತಾಗಿದೆ. ಕೆಲವೊಂದು ಆನ್–ಲೈನ್ ಕಾರ್ಯ ಚಟುವಟಿಕೆಗಳನ್ನು ಸಂಯೋಜಿಸಿ, ಸದಸ್ಯರ ನಡುವಿನ ಸಂಪರ್ಕವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಲಾಗಿದೆ. ಈ ನಿಟ್ಟಿನಲ್ಲಿ ಶ್ರಮಿಸಿದ ಎಲ್ಲಾ ಉಪವಿಭಾಗಗಳ ಸಂಚಾಲಕರು ಮತ್ತು ಅವರ ಕ್ರಿಯಾಶೀಲ ಕಾರ್ಯತಂಡಕ್ಕೆ ಅಭಿನಂದನೆ.

ಶಾರ್ವರಿ ಮುಗಿದು ಪ್ಲವ ಬರುವ ಹೊತ್ತಿಗೆ ಪರಿಸ್ಥಿತಿ ಸುಧಾರಣೆಯಾಗಿ, ಸಹಜ ಸ್ಥಿತಿಗೆ ಮರಳುವ ಎಲ್ಲಾ ನಿರೀಕ್ಷೆಗಳಿದ್ದರೂ ಸಹಾ, ಕೋವಿಡ್ ಮಹಾಮಾರಿಯ ಎರಡನೆಯ ಅಲೆ ಮತ್ತಷ್ಟು ತೀವ್ರವಾಗಿ ನಮ್ಮನ್ನು ಕಾಡುತ್ತಿದೆ. ಪರಿಸ್ಥಿತಿ ನಿಯಂತ್ರಣ ಮೀರಿ ಬಿಗಡಾಯಿಸುತ್ತಿದ್ದು, ಸರಕಾರದ ಕಟ್ಟುನಿಟ್ಟಿನ ಕ್ರಮಗಳಿಗೆ ಬೆಲೆ ನೀಡಿ ಜನರು ಅತ್ಯಂತ ಎಚ್ಚರವನ್ನು ವಹಿಸಿ, ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಅಗತ್ಯವಾಗಿದೆ. ಲಸಿಕೆಗೆ ಅರ್ಹತೆಯುಳ್ಳ ಎಲ್ಲರೂ ಲಸಿಕೆಯನ್ನು ಹಾಕಿಸಿ ಕೊಳ್ಳುವುದು, ಸಾಮಾಜಿಕ ಅಂತರವನ್ನು ಪಾಲಿಸುವುದು, ಮಾಸ್ಕ್ ಧರಿಸುವುದು ಮೊದಲಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದರಿಂದ ಮಾತ್ರಾ ನಮ್ಮನ್ನು ನಾವು ಕಾಪಾಡಿಕೊಳ್ಳಬಹುದು. ನಮ್ಮ ಸದಸ್ಯರು ಇದನ್ನು ಪೂರ್ಣವಾಗಿ ಅರಿತು, ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಾರೆ ಎಂಬ ಧೈರ್ಯ ನನಗಿದೆ.

ವರ್ಷ ಬದಲಾಗುವುದು ಕಾಲದ ನಿಯಮ. ಹಗಲು ರಾತ್ರಿಯಲ್ಲಿ, ರಾತ್ರಿ ಹಗಲಿನಲ್ಲಿ, ಶಿಶಿರಗಳು ವಸಂತನಲ್ಲಿ ಕಳೆದುಹೋಗುತ್ತವೆ. ಕಾಲ ಪುರುಷನಿಗೆ ಆದಿ–ಅಂತ್ಯಗಳೆಂಬುವುದೇ ಇಲ್ಲ. ವಿಶ್ರಾಂತಿಯನ್ನಂತೂ ಅವನೆಂದೂ ಕಂಡಿಲ್ಲ. ತನ್ನ ದಾರಿಯಲ್ಲಿ ಬಂದದನ್ನು ದಯೆ, ದಾಕ್ಷಿಣ್ಯಗಳಿಲ್ಲದೆ ತಿಂದುಂಡು ಸಾಗುತ್ತಲೇ ಇರುವುದು ಇವನ ಸ್ವಭಾವ. ಈ ಅನೂಚಾನವಾದ ನಿಯಮಕ್ಕೆ ನಾವು ತಲೆಬಾಗಲೇ ಬೇಕು.

ದೇವರ ದಯೆಯಿಂದ ಎಲ್ಲವೂ ಸರಿಯಾಗಿ, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಬಹುದೆಂಬ ಆಶಾಭಾವನೆಯಿಂದ ಸಾಂಸ್ಕೃತಿಕ ವಿಭಾಗವು 2021–22ನೇ ವರ್ಷದ ಪ್ರಪ್ರಥಮ ಕಾರ್ಯಕ್ರಮ ವಸಂತೋತ್ಸವವನ್ನು ನಮ್ಮ ಬಳಗದ ಸಭಾಗೃಹದಲ್ಲಿ ಸಂಯೋಜಿಸುವ ಯೋಜನೆ ಹಾಕಿಕೊಂಡಿತ್ತು. ಆದರೆ ಕೋವಿಡ್‌ನ ಆರ್ಭಟ ದಿನದಿನಕ್ಕೆ ಜಾಸ್ತಿಯಾಗುತ್ತಿರುವುದರಿಂದ ಮತ್ತು ಸರಕಾರ ವಿಧಿಸಿದ ಕಟ್ಟುನಿಟ್ಟಿನ ನೀತಿ ನಿಯಮಗಳಿಂದ ಇದನ್ನು ಕೈಬಿಡುವುದು ಅನಿವಾರ್ಯವಾಗಿದೆ.

ಪ್ಲವ ಎಂದರೆ ನೀರು, ದೋಣಿ, ಹರಿಗೋಲು ಎಂಬಿತ್ಯಾದಿ ಅರ್ಥಗಳಿವೆ. ಪ್ರಸಕ್ತದ ವಿಷಮ ಪರಿಸ್ಥಿತಿಯ ಸಂಕಷ್ಟಗಳ ಸಾಗರವನ್ನು ಯಶಸ್ವಿಯಾಗಿ ದಾಟಿಸುವ ಹರಿಗೋಲು ಆಗಲಿ ಈ ಪ್ಲವ ಸಂವತ್ಸರ ಎಂಬ ಸದಾಶಯಗಳೊಡನೆ ತಮಗೆಲ್ಲರಿಗೂ ನೂತನ ಸಂವತ್ಸವರದ ಶುಭ ಹಾರೈಕೆಗಳು.

ಶುಭಾಶಯಗಳೊಂದಿಗೆ,

(ವಿಜಯಲಕ್ಷ್ಮಿ ಭಟ್ ಎಸ್.)

## Executive Committee Members : 2020-2022


| Name | Contact Numbers |
|---|---|
| *President* | |
| Smt. Vijayalakshmi Bhat S. | 98441 52107 |
| *Vice Presidents* | |
| B. Ramachandra Upadhya | 99024 00072 |
| S. Haridas Upadhya | 94480 01892 |
| *Secretary* | |
| M.K. Gurumurthy | 98440 22692 |
| *Joint Secretary* | |
| A. Sandeep Rao | 98450 98150 |
| *Treasurer* | |
| B.S. Balachandra Tolpadi | 94481 34268 |
| *Convener, Cultural Wing* | |
| Smt. Shobha Radhakrishna | 98447 25547 |
| **Convener, Religious Wing** | |
| P N Vishnumurthy Kuddannaya | 94803 05426 |
| **Convener, Youth Wing** | |
| K. Gopala Krishna | 99801 28049 |
| *Convener, Edn. Assistance Programme* | |
| Sharath Chandra S.N. | 98860 40271 |
| *Convener, Public Relation Wing* | |
| Y. Jayantha Rao | 94482 74519 |
| *Convener, Membership Devt. Wing* | |
| M. Krishna Prasad | 98450 18183 |
| *Convener, Community Services* | |
| Dr. K.N. Adiga Adoor | 94488 48154 |
| *Convener, Media & Communications* | |
| M. Dinesh Rao | 99456 88955 |
| *Editor, Brughu Vani* | |
| M. Sathyanarayana Bhat | 99458 02607 |
| *Members* | |
| Smt. Geetha Vasudeva Rao | 98808 99997 |
| H. Ramesh Bhat | 98450 24708 |
| P.C. Rao | 98444 46309 |
| T.S. Nagaraja Upadhyaya | 93412 26763 |
| M Mohan Rao | 98453 79956 |
| *Permanent Invitees / Past Presidents* | |
| P.S. Bagilthaya | 98440 83582 |
| K. Vasudeva Rao | 98450 57111 |
| U A P Ballal | 99860 28602 |
| S T R Madi | 99029 77948 |
| *Special Invitees* | |
| Smt. Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| Smt. Geetha P.R. Rao | 99459 38411 |
| Y. Radha Krishna | 98440 58851 |
| Prakash K Bhat | 98455 06777 |
| N Srinivasa Rao | 98455 22165 |
| Smt. Madhavi Ballal | 99860 39107 |
| Vishnu Sharan K. Bhat | 98862 69018 |
| Gururaj Pejavar | 98440 09293 |
| Madhava Upadhya | 94480 41424 |


ಒಳಪುಟಗಳಲ್ಲಿ.....


ಅಧ್ಯಕ್ಷರ ಮಾತು ... 1

ಪ್ರತಿಭೆಗೆ ಸಂದ ಬಹುಮಾನ ... 3

ಇರುವುದೊಂದೆ ಜೀವನ... ... 4

ವಿಶೇಷ ದಿನಗಳು + ಪ್ಲವಕ್ಕೆ ಸುಸ್ವಾಗತ ... 6

ನ್ಯಾಯ ನಿರ್ಣಯ ಹೇಗಿರಬೇಕು? ... 7

ಪುತ್ತಿಗೆ ಶ್ರೀಯವರಿಗೆ ಡಾಕ್ಟರೇಟ್ ... 8

ಎನ್.ಆರ್. ನಾರಾಯಣರಾವ್ ಶ್ರದ್ಧಾಂಜಲಿ ... 9

ಕೊಲೆಸ್ಟ್ರಾಲ್–ಕೊಲೆಪಾತಕಿಯೇ? ... 10

ಮಗಳೇ ನಿನಗೆ ವಂದನೆ ... 12

ಹಮಾರಾ PRO ಪುಸ್ತಕ ಬಿಡುಗಡೆ / ನ್ಯೂಜಿಲೆಂಡ್ ಕ್ರಿಕೆಟ್‌ನಲ್ಲಿ ರಚಿನ್ ರವೀಂದ್ರ ... 13

ಸುದ್ದಿ ಸಂಗ್ರಹ ... 15



ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.


## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


**ಎಂ. ಸತ್ಯನಾರಾಯಣ ಭಟ್**


"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085

E-mail: msbhat1958@gmail.com

**ಮುಖಪುಟ ವಿವರ :**

# ಪ್ರತಿಭೆಗೆ ಸಂದ ಬಹುಮಾನ

ನಮ್ಮ ಬಳಗವು ಪ್ರತಿ ವರ್ಷ ನಡೆಸುತ್ತಿದ್ದ ಮಕ್ಕಳ ಪ್ರತಿಭಾ ಸ್ಪರ್ಧೆ ಮತ್ತು ಮೇಳವನ್ನು ಕಳೆದ ವರ್ಷ ಕೋವಿಡ್ 19 ಮಹಾಮಾರಿಯ ಉಪಟಳದಿಂದ ಸಂಯೋಜಿಸಲು ಸಾಧ್ಯವಾಗದಿದ್ದರೂ ಆನ್‌ಲೈನ್ ಮೂಲಕ ವಿವಿಧ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿ, ಸದಸ್ಯರ ಮನಸ್ಸು ಗೆದ್ದಿದೆ. ಸಾಂಸ್ಕೃತಿಕ ವಿಭಾಗವು ಬಾಲ ವಿಭಾಗ ಮತ್ತು ಕಿಶೋರ ವಿಭಾಗದಲ್ಲಿ ಮಕ್ಕಳಿಗೆ ದೇವರನಾಮ, ಭಕ್ತಿಗೀತೆ, ಭಜನೆ, ಭಾವಗೀತೆ, ಜನಪದ ಗೀತೆ, ಗಜಲ್ಸ್ ಮತ್ತು ಚಲನಚಿತ್ರ ಗೀತೆಗಳ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ 'ಹಾಡೋಣ ಬಾರಾ ಹಾಡೋಣ' ಎಂಬ ಶೀರ್ಷಿಕೆಯಡಿಯಲ್ಲಿ ಏರ್ಪಡಿಸಿತ್ತು. ಹಾಗೆಯೇ "ನಟನ–ಪಠಣ" ಎಂಬ ಶಿರೋನಾಮೆಯಲ್ಲಿ ಏಕಪಾತ್ರಾಭಿನಯ ಮತ್ತು ಶ್ಲೋಕ ಪಠಣ ಸ್ಪರ್ಧೆಗಳನ್ನೂ ಸಂಯೋಜಿಸಲಾಗಿತ್ತು. ಜುಲೈ 2020 ತಿಂಗಳಲ್ಲಿ ನಡೆದ ಹಾಡೋಣ ಬಾರಾ ಸ್ಪರ್ಧೆಯಲ್ಲಿ ಒಟ್ಟು 98 ಸ್ಪರ್ಧಿಗಳು ಹಾಗೂ ಆಗಸ್ಟ್ 2020 ತಿಂಗಳಲ್ಲಿ ಏರ್ಪಡಿಸಿದ್ದ ನಟನ–ಪಠಣ ಸ್ಪರ್ಧೆಯಲ್ಲಿ 44 ಮಕ್ಕಳು ಪಾಲ್ಗೊಂಡಿರುವುದು ಗಮನಾರ್ಹ ವಿಚಾರ. ಇದರಿಂದ ಪ್ರೇರೇಪಣೆ ಪಡೆದ ಯುವ ವಿಭಾಗವು ಸೆಪ್ಟೆಂಬರ್ 2020ರಲ್ಲಿ ದೊಡ್ಡವರಿಗಾಗಿ ಆನ್‌ಲೈನ್ ಗಾಯನ ಸ್ಪರ್ಧೆಯನ್ನು ಸಂಯೋಜಿಸಿದ್ದು ಇದರಲ್ಲಿ ಒಟ್ಟು 113 ಹಾಡುಗಳ ವಿಡಿಯೋಗಳು ಬಂದಿರುವುದು, ನಮ್ಮ ಸದಸ್ಯರಲ್ಲಿ ಸುಪ್ತವಾಗಿರುವ ಪ್ರತಿಭೆಗೆ ಸಾಕ್ಷಿ. ಈ ಎಲ್ಲಾ ಸ್ಪರ್ಧೆಗಳ ವಿವರಗಳನ್ನು ಹಾಗೂ ಬಹುಮಾನ ವಿಜೇತರ ಹೆಸರನ್ನು ಭೃಗುವಾಣಿಯ ಜುಲೈ–ಸೆಪ್ಟೆಂಬರ್ 2020 ಸಂಚಿಕೆಯಲ್ಲಿ ನೀಡಲಾಗಿತ್ತು. ಈ ಸ್ಪರ್ಧೆಗಳ ಬಹುಮಾನ ವಿಜೇತರಿಗೆ ದಿನಾಂಕ 9.1.2021 ರಂದು ಹೋಟೆಲ್ ಅಜಂತಾದಲ್ಲಿ ನಡೆದ ಬಳಗದ ಕಾರ್ಯಕಾರಿ ಸಮಿತಿಯ ಸಭೆಯ ಸಂದರ್ಭದಲ್ಲಿ ಬಹುಮಾನಗಳನ್ನು ನೀಡಿ ಅಭಿನಂದಿಸಲಾಗಿದೆ. ಬಹುಮಾನ ವಿಜೇತರಿಗೆ ಅಭಿನಂದನೆಗಳು.





## ಮಹಿಳಾ ವಿಭಾಗದಿಂದ ಶ್ರೀ ಸತ್ಯನಾರಾಯಣ ಪೂಜೆ

ಆನಂದ ಬಳಗದ ಮಹಿಳಾ ವಿಭಾಗ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಮಕರ ಸಂಕ್ರಾಂತಿಯಂದು (14.1.2021) ಶ್ರೀ ಸತ್ಯನಾರಾಯಣ ಪೂಜೆಯನ್ನು ಭಕ್ತಿ ಶ್ರದ್ಧೆಗಳಿಂದ ನೆರವೇರಿಸಲಾಗಿದೆ. ಹೊಟೆಲ್ ಉಡ್‌ಲ್ಯಾಂಡ್ಸ್‌ನ ಆವರಣದಲ್ಲಿ ವೇದಮೂರ್ತಿ ವಿಷ್ಣುಮೂರ್ತಿ ಸರಳಾಯರವರ ಪೌರೋಹಿತ್ಯದಲ್ಲಿ ನಡೆದ ಈ ಪೂಜೆಯಲ್ಲಿ ಬಳಗದ ಅಧ್ಯಕ್ಷರು, ಮಹಿಳಾ ವಿಭಾಗದ ಅಧ್ಯಕ್ಷರು ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಕಲ್ಪೋಕ್ತ ಪೂಜೆ, ಕಥಾ ಶ್ರವಣ ನಂತರ ನಡೆದ ಮಹಾ ಮಂಗಳಾರತಿಯಾದ ಮೇಲೆ ಸಪಾದ ಭಕ್ಷ್ಯ ಸಹಿತ ವಿಶೇಷ ಫಲಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಹೊಸ ಸಂವತ್ಸರದ ಸಂದೇಶ :

# ಇರುವುದೊಂದೆ ಜೀವನ – ಚಂದವಾಗಿ ಬಾಳೋಣ!

ಎಂದೋ ನಡೆದುಹೋದ ಕಹಿ ಗಳಿಗೆಗಳನ್ನು ಪ್ರತೀ ಬಾರಿ ನೆನೆದಾಗಲೂ ಶರೀರದಲ್ಲಿ ಅಂದು ಅನುಭವಿಸಿದ ಕೋಪ, ಕ್ರೋಧ, ವ್ಯಥೆ, ನಿರಾಶೆ, ಹತಾಶೆ ಈ ರೀತಿಯ ನೆಗಟಿವ್ ಎಮೋಷನ್‌ಗಳು ಮತ್ತೆ ಅದೇ ರೀತಿ ಮರುಕಳಿಸುತ್ತವೆ. ಪ್ರತಿ ಬಾರಿಯ ನೆನಪಿನಲ್ಲಿಯೂ ನಿಮ್ಮ ಶರೀರ ಮನಸ್ಸು ಮತ್ತೆ ಕೆಟ್ಟಸನ್ನಿವೇಶದ ಪ್ರಭಾವವನ್ನು ಮತ್ತೊಮ್ಮೆ ಅನುಭವಿಸುತ್ತಾ ಜರ್ಜರಿತವಾಗುತ್ತಾ ಹೋಗುತ್ತದೆ.

ಇದು ನಮ್ಮ ಮಿದುಳಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯ ಪರಿಣಾಮ. ನಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳಿಗೆ ತಕ್ಕಂತೆ ಮಿದುಳಿಗೆ ಸೂಚನೆಗಳು ಹೋಗುತ್ತವೆ. ಮಿದುಳು ಅದಕ್ಕೆ ಅನುಗುಣವಾಗಿ ಹಾರ್ಮೋನ್ಗಳನ್ನು ಉತ್ಪತ್ತಿ ಮಾಡಲು ನಿರ್ದೇಶನ ನೀಡುತ್ತದೆ.

ಈ ಹಾರ್ಮೋನ್‌ಗಳೇ ಶರೀರವನ್ನು ದುರ್ಬಲ ಗೊಳಿಸುತ್ತವೆ. ನಮ್ಮ ದೇಹದಲ್ಲಿ 60 ಟ್ರಿಲಿಯನ್‌ಗೂ ಅಧಿಕ ಜೀವಕೋಶಗಳಿವೆ. ಈ ಜೀವಕೋಶಗಳು ಆರೋಗ್ಯಕರವಾಗಿ ಇರಬೇಕೆಂದರೆ ಅವುಗಳಿಗೆ ಆರೋಗ್ಯಕರ ವಾತಾವರಣವೂ ಇರಬೇಕು. ಜೀವಕೋಶಗಳಿಗೆ ಬೇಕಾದ ಪ್ರೊಟೀನ್, ವಿಟಮಿನ್, ಮಿನರಲ್ಸ್, ಅಮಿನೊ ಆಸಿಡ್‌ಗಳ ಜೊತೆಗೆ ಉಲ್ಲಾಸದ ಮನಸ್ಸು ಅಷ್ಟೇ ಮುಖ್ಯ. ಸರಿಯಾದ ಆರೈಕೆ ಇಲ್ಲದೆ ಜೀವಕೋಶಗಳು ಹಾಳಾಗುವುದಕ್ಕಿಂತ, ಹತ್ತುಪಟ್ಟು ಹೆಚ್ಚು ಕೆಟ್ಟಯೋಚನೆಗಳಿಂದ, ನೆಗಟಿವ್ ಎಮೋಷನ್ ಗಳಿಂದ ಹಾನಿಗೆ ಒಳಗಾಗುತ್ತವೆ.

ಇದೇ ಮನಸ್ಥಿತಿಯಲ್ಲಿ ಶರೀರವಿದ್ದಲ್ಲಿ ಜೀವ ಕೋಶಗಳು ಕೆಡಲು ಶುರುವಾಗುತ್ತವೆ. ಹೀಗೆ ಹಾಳಾದ ಜೀವಕೋಶಗಳು ತಮ್ಮ ಸುತ್ತಮುತ್ತಲಿನ ಆರೋಗ್ಯವಂತ ಕೋಶಗಳನ್ನು ನಾಶಮಾಡಲು ತೊಡಗುತ್ತವೆ. ಶರೀರ ಬಹಳ ಸುಲಭವಾಗಿ ಕಾಯಿಲೆಗಳಿಗೆ ತುತ್ತಾಗುತ್ತದೆ. ಬೇಗ ಕೃಶವಾಗುತ್ತದೆ.

ಮನುಷ್ಯನೆಂದ ಮೇಲೆ "ಸಿಟ್ಟು ಕೋಪ ದುಃಖ" ಇತ್ಯಾದಿ ಭಾವನೆಗಳು ಇರುವುದು ಸಹಜ. ಅವೆಲ್ಲವೂ ಬರದಂತೆ ಸದಾ ನಗುನಗುತ್ತಲೇ ಇರಬೇಕು ಅಂದರೆ ಕಷ್ಟವೇ ಹೌದು. ಎಲ್ಲರೂ ನಿತ್ಯ ಆನಂದ ವಾಗಿರಲು ಸಾಧ್ಯವಿಲ್ಲ....

ಸಂಸ್ಕೃತದಲ್ಲಿ ಒಂದು ಮಾತಿದೆ ಯದ್ಭಾವಮ್ ತದ್ಭವತಿ ನಾವು ಏನು ಯೋಚನೆ ಮಾಡು ತ್ತೇವೆಯೋ ನಾವು ಅದೇ ಆಗುತ್ತೇವೆ. "ಯಥಾ ಪಿಂಡೆ ತಥಾ ಬ್ರಹ್ಮಾಂಡೇ'' ಎಂಬಂತೆ "ಅಣು ಹೇಗಿರುತ್ತದೆಯೋ ಆಗೆಯೇ ಈ ಬ್ರಹ್ಮಾಂಡವೂ"...

ಸನ್ನಿವೇಶಗಳಿಗೆ ತಕ್ಕ ಹಾಗೆ ನಾವು ಪ್ರತಿಕ್ರಿಯೆ ನೀಡಲೇಬೇಕು. ಅದು ಸಹಜ. ಹೆದರಿಕೆ ಭಯ ಇಲ್ಲದೆ ನಾವು ಬದುಕಲಾರೆವು. ಜೀವ ರಕ್ಷಣೆಗೆ ನಾವು ಹೆದರಲೇಬೇಕು. ಹಾಗೆ ಕೋಪಗೊಳ್ಳಲೂ ಬೇಕು. ಆಗ ಸ್ರವಿಸುವ ಹಾರ್ಮೋನ್‌ಗಳು ದೇಹರಕ್ಷಣೆಗೆ ಬೇಕಾದ ಅಧಿಕ ಹಾರ್ಮೋನ್‌ಗಳನ್ನು ಸ್ರವಿಸಿ ಆ ಕ್ಷಣದಿಂದ ನಮ್ಮನ್ನು ಪಾರುಮಾಡುತ್ತದೆ. ಆದರೆ ಅದೇ ಎಮೋಷನ್‌ಗಳನ್ನು ಸದಾಕಾಲ ನಾವು ಮನಸಿನಲ್ಲಿ ಪೋಷಿಸಬಾರದು ಅಷ್ಟೇ. ನಮ್ಮನ್ನು ದ್ವೇಷಿಸುವರನ್ನು ನಾವು ಕ್ಷಮಿಸಬೇಕು. ಅದುದೊಡ್ಡ ಗುಣ ಅಂತ ಅಲ್ಲ "ನಮ್ಮ ಒಳಿತಿಗಾಗಿ. ನಮ್ಮ ಆರೋಗ್ಯಕ್ಕಾಗಿ" ಮಾತ್ರ.....

ನಮ್ಮ ದೇಹದಲ್ಲಿ ನಾಲ್ಕು ಹಾರ್ಮೋನ್‌ಗಳು ಮನಸ್ಸಿಗೆ ಸಂತೋಷವನ್ನು ಉಂಟುಮಾಡುವಂತವು.

1. ಎಂಡೋರ್ಫಿನ್
2. ಡೋಪಮಿನ್
3. ಸೇರೋಟಾನಿನ್
4. ಆಕ್ಸಿಟೋಸಿನ್ ಇವೇ ನಾಲ್ಕು

ನಾವು ವ್ಯಾಯಾಮ ಮಾಡಿದಾಗ ಶರೀರದಲ್ಲಿ *''ಎಂಡೋರ್ಫಿನ್"* ಉತ್ಪತ್ತಿಯಾಗುತ್ತದೆ. ವ್ಯಾಯಾಮದ ನೋವನ್ನು ತಡೆಯಲು ಇದು ಸಹಾಯಮಾಡುತ್ತದೆ. ಕಸರತ್ತಿನ ನೋವೂ ಹಿತ ಎನಿಸುವುದು ಇದರಿಂದಲೇ. ಜೋರಾಗಿ ನಗುವುದರಿಂದಲೂ ಎಂಡೋರ್ಫಿನ್ ಬಿಡುಗಡೆ ಆಗುತ್ತದೆ. ನಿತ್ಯ 30 ನಿಮಿಷ ವ್ಯಾಯಾಮ ಮಾಡಿದರೆ, ಮತ್ತು ನಗು ಬರುವಂತಹ ಲಘು ಓದು, ಸಿನೆಮಾ,

ಹರಟೆ ಇವುಗಳಿಂದ ಅಂದಿನ ಎಂಡೋರ್ಫಿನ್ ಕೋಟಾವನ್ನು ನಾವು ಪಡೆಯಬಹುದು.

ಯಾರಾದರೂ ನಮ್ಮನ್ನು ಹೊಗಳಿದಾಗ, ನಮ್ಮ ಕೆಲಸಗಳನ್ನು ಮೆಚ್ಚಿ ಮಾತಾನಾಡಿದಾಗ ನಮ್ಮ ಶರೀರದಲ್ಲಿ *"ಡೋಪಮಿನ್"* ಉತ್ಪತ್ತಿ ಆಗುತ್ತದೆ. ಅಡುಗೆ ಕೆಲಸ ಮಾಡುವ ಮನೆಯ ಹೆಣ್ಣುಮಕ್ಕಳಿಗೆ ಈ ಡೋಪಮಿನ್ ಸಿಗುವುದು ಕಷ್ಟ ಮತ್ತು ಅದರ ಪ್ರಮಾಣವು ಕಡಿಮೆ ಇದಕ್ಕೆ ಕಾರಣ ಅವರು ಕಷ್ಟಪಟ್ಟು ಅಡುಗೆ ಮಾಡಿದರು ಅಥವಾ ಯಾವುದೆ ಸಾಧನೆ ಮಾಡಿದರೂ ಅದಕ್ಕೆ ತಪ್ಪು ಹಿಡಿಯುವರೆ ಜಾಸ್ತಿ. ದಯಮಾಡಿ ನಿಮ್ಮ ಮನೆಯವರ ಅಡುಗೆಯನ್ನು ನೀವು ಕಡ್ಡಾಯವಾಗಿ ಹೊಗಳಿರಿ ಮತ್ತು ಅವರ ಸಾಧನೆಗೆ ಮೆಚ್ಚುಗೆ ಸೂಚಿಸಿ. ಏಕೆಂದರೆ ಇದರಿಂದ ಡೋಪಮಿನ್ ಪ್ರಮಾಣ ಹೆಚ್ಚುತ್ತದೆ. ನಾವು ಏನಾದರೂ ಹೊಸವಸ್ತು ಖರೀದಿಸಿದಾಗ ಖುಷಿ ಆಗುವುದು ಈಡೋಪಮಿನ್‌ನಿಂದಲೇ. ಹಾಗಾದರೇ ಶಾಪಿಂಗ್ ಮಾಡಿದಾಗ ಸಂತೋಷವಾಗುವುದು ಏಕೆ ಎಂದು ನಿಮಗೆ ಗೊತ್ತಾಗಿರಬೇಕು.

ನಾವು ಬೇರೆಯವರಿಗೆ ಸಹಾಯ ಮಾಡಿದಾಗ ನಮ್ಮಲ್ಲಿ ಉಂಟಾಗುವ ಧನ್ಯತಾಭಾವಕ್ಕೆ ಕಾರಣ *"ಸೇರೋಟಿನ್"* ಎನ್ನುವ ಹಾರ್ಮೋನ್. ಇದು ನಮ್ಮ ಮನಸ್ಸನ್ನು ಮುದಗೊಳಿಸುತ್ತೆ. ಅಷ್ಟೇ ಅಲ್ಲ ನಮ್ಮ ಜೀವಕೋಶಗಳನ್ನು ಉತ್ತೇಜಿಸುತ್ತದೆ. ಅಡ್ರೆಸ್ ಕೇಳುವ ದಾರಿಹೋಕರಿಗೆ ಮಾಹಿತಿ ನೀಡಿದರೆ, ಅಂಧರಿಗೆ ರಸ್ತೆ ದಾಟಲು ಸಹಾಯ ಮಾಡಿದರೆ ಇತ್ಯಾದಿ ಸಣ್ಣಪುಟ್ಟ ಸಹಾಯಹಸ್ತ ಚಾಚುವ ಕೆಲಸಗಳಿಂದ ಈ ಹಾರ್ಮೋನ್ ನಮ್ಮನ್ನು ಖುಷಿಯಾಗಿ ಇಡುತ್ತದೆ....

ನಾವು ಬೇರೆಯವರಿಗೆ ಆತ್ಮೀಯತೆ ತೋರಿದಾಗ *"ಆಕ್ಸಿಟೋಸಿನ್"* ಉತ್ಪತ್ತಿ ಆಗುತ್ತದೆ. ಅಳುವ ಮಗುವನು ರಮಿಸುವಾಗ ನಮ್ಮ ಸ್ಪರ್ಶ ಅಪ್ಪುಗೆ ನಮ್ಮಲ್ಲಿ ಮತ್ತು ಮಗುವಿನಲ್ಲೂ ಆಕ್ಸಿಟೋಸಿನ್ನಿಂದಾಗಿ ಮನಸು ಸಮಾಧಾನಗೊಳ್ಳುತ್ತದೆ. ಕೈಕುಲುಕುವುದರಿಂದ (thanks) ಆತ್ಮೀಯ ಆಲಿಂಗನದಿಂದ ಮನಸ್ಸು ಪ್ರಫುಲ್ಲಿತವಾಗುತ್ತದೆ....

ಹೀಗಾಗಿ

ನಮ್ಮ ಆರೋಗ್ಯದ ದೃಷ್ಟಿಯಿಂದ, ನಮ್ಮ ಜೀವನವನ್ನು ಸುಖಮಯವಾಗಿಸುವ ದೃಷ್ಟಿಯಿಂದ ದಯವಿಟ್ಟು ಪ್ರತಿದಿನ ವ್ಯಾಯಾಮ ಮಾಡಿ, ನಗುತ್ತ ಇರಿ, ಬೇರೆಯವರ ಪ್ರಯತ್ನಗಳನ್ನು ಹೊಗಳಿ, ಅಗತ್ಯ ಇರುವವರಿಗೆ ಕೈಲಾದಷ್ಟು ಸಣ್ಣಪುಟ್ಟ ಸಹಾಯಮಾಡಿ. ಸಹಾಯ ಮಾಡಲು ಸಾಧ್ಯವಾಗದಿದ್ದರೆ ಪರವಾಗಿಲ್ಲ ಮಾತಿನಲ್ಲಿ ಆತ್ಮೀಯತೆ ಇರಲಿ. ಆದಷ್ಟೂ ಎಲ್ಲರೊಂದಿಗೆ ಪ್ರೀತಿಯಿಂದ ಜೀವಿಸಿ. ಕೊನೆಯದಾಗಿ ಆದಷ್ಟು ಬೇರೆಯವರ ತಪ್ಪುಗಳನ್ನು ಕ್ಷಮಿಸಿಬಿಡಿ. ಇಲ್ಲದಿದ್ದರೆ, ಸಂಬಂಧದಿಂದಲೇ ದೂರವಿದ್ದು ಬಿಡಿ....

## ಫಾರಂ 4 (ನಿಯಮ 8 ರಂತೆ)


**ಭೃಗುವಾಣಿ ಕನ್ನಡ ತ್ರೈಮಾಸಿಕ ಪತ್ರಿಕೆಯ ಮಾಲಿಕತ್ವ ಮತ್ತು ಇತರ ವಿವರಗಳು**

| | | |
|---|---|---|
| ಪ್ರಕಟಣೆಯ ಸ್ಥಳ | : | ಹೋಟೆಲ್ ಅಜಂತಾ ಆವರಣ 22ಎ, ಎಂ.ಜಿ.ರಸ್ತೆ, ಬೆಂಗಳೂರು–1 |
| ಪ್ರಕಟಣೆಯ ಅವಧಿ | : | ಮೂರು ತಿಂಗಳಿಗೊಮ್ಮೆ |
| ಮುದ್ರಕರು | : | ಪಿ.ಎಸ್. ವೆಂಕಟೇಶ್ ಬಾಬು ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಬೆಂಗಳೂರು – 02 |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಹೊಸ ತರಗುಪೇಟೆ, ಬೆಂಗಳೂರು – 02 |
| ಪ್ರಕಾಶಕರು | : | ಶ್ರೀಮತಿ ವಿಜಯಲಕ್ಷ್ಮಿ ಭಟ್ .ಎಸ್ |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಅಧ್ಯಕ್ಷರು, ಆನಂದ ಬಳಗ, 22ಎ ಎಂ.ಜಿ. ರಸ್ತೆ ಬೆಂಗಳೂರು – 01 |

ನಾನು, ಶ್ರೀಮತಿ ವಿಜಯಲಕ್ಷ್ಮಿ ಭಟ್ .ಎಸ್, ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸಂಪೂರ್ಣ ಸತ್ಯವಾಗಿದೆ.

ಬೆಂಗಳೂರು ಸಹಿ/–

**20.3.2021** **(ವಿಜಯಲಕ್ಷ್ಮಿ ಭಟ್ .ಎಸ್)**

## ಏಪ್ರಿಲ್-ಜುಲೈ 2021ರ ಅವಧಿಯ ವಿಶೇಷ ದಿನಗಳು

| | |
|---|---|
| ಏಪ್ರಿಲ್ 14, ಬುಧವಾರ | ಸೌರಯುಗಾದಿ (ವಿಷು), ಪ್ಲವ ಸಂವತ್ಸರ ಆರಂಭ |
| ಏಪ್ರಿಲ್ 21, ಬುಧವಾರ | ಶ್ರೀರಾಮ ನವಮೀ |
| ಏಪ್ರಿಲ್ 23, ಶುಕ್ರವಾರ | ಸರ್ವೈಕಾದಶೀ |
| ಏಪ್ರಿಲ್ 27, ಮಂಗಳವಾರ | ಹುಣ್ಣಿಮೆ, ಕಾರ್ಮಿಕ ದಿನಾಚರಣೆ |
| ಮೇ 7, ಶುಕ್ರವಾರ | ಸರ್ವೈಕಾದಶೀ |
| ಮೇ 11, ಮಂಗಳವಾರ | ಅಮಾವಾಸ್ಯೆ |
| ಮೇ 12, ಬುಧವಾರ | ವೈಶಾಖ ಮಾಸಾರಂಭ |
| ಮೇ 14, ಶುಕ್ರವಾರ | ವೃಷಭ ಸಂಕ್ರಮಣ ಅಕ್ಷಯ ತೃತೀಯಾ |
| ಮೇ 23, ಭಾನುವಾರ | ವೈಷ್ಣವೈಕಾದಶೀ |
| ಮೇ 25, ಮಂಗಳವಾರ | ಶ್ರೀನೃಸಿಂಹ ಜಯಂತೀ |
| ಮೇ 26, ಬುಧವಾರ | ಬುದ್ಧ ಪೂರ್ಣಿಮಾ |
| ಜೂನ್ 6, ಭಾನುವಾರ | ವೈಷ್ಣವೈಕಾದಶೀ |
| ಜೂನ್ 10, ಗುರುವಾರ | ಅಮಾವಾಸ್ಯೆ |
| ಜೂನ್ 11, ಶುಕ್ರವಾರ | ಜ್ಯೇಷ್ಠಮಾಸ, ಗ್ರೀಷ್ಮ ಋತು ಆರಂಭ |
| ಜೂನ್ 14, ಸೋಮವಾರ | ಮಿಥುನ ಸಂಕ್ರಮಣ |
| ಜೂನ್ 20, ಭಾನು | ಭಾಗೀರಥಿ ಜನ್ಮದಿನ |
| ಜೂನ್ 21, ಸೋಮವಾರ | ಸರ್ವೈಕಾದಶೀ |
| ಜೂನ್ 24, ಗುರುವಾರ | ಹುಣ್ಣಿಮೆ |
| ಜುಲೈ 5, ಸೋಮವಾರ | ಸರ್ವೈಕಾದಶೀ |
| ಜುಲೈ 10, ಶನಿವಾರ | ಅಮಾವಾಸ್ಯೆ |
| ಜುಲೈ 11, ಭಾನುವಾರ | ಆಷಾಡ ಮಾಸಾರಂಭ |
| ಜುಲೈ 16, ಶುಕ್ರವಾರ | ಕರ್ಕಾಟಕ ಸಂಕ್ರಮಣ |
| ಜುಲೈ 20, ಮಂಗಳ | ಪ್ರಥಮೈಕಾದಶೀ, ತಪ್ತ ಮುದ್ರಾಧಾರಣ |
| ಜುಲೈ 21, ಬುಧವಾರ | ಶಾಕ ವ್ರತಾರಂಭ |
| ಜುಲೈ 24, ಶನಿವಾರ | ಗುರುಪೂರ್ಣಿಮಾ ಚಾತುರ್ಮಾಸ್ಯ ಆರಂಭ |

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)**

## ಪ್ಲವನಾಮ ಸಂವತ್ಸರಕೆ ಸುಸ್ವಾಗತ



ಶ್ರೀ ಟಿ.ಎಸ್. ನಾಗರಾಜ
ಉಪಾಧ್ಯಾಯ

"ಶಾರ್ವರಿಗೆ" ತೆರೆ ಎಳೆದು ಸ್ವಾಗತಿಸುವ ನವಸಂವತ್ಸರವ
ಎರಡಕ್ಷರದ "ಪ್ಲವ"ದಲ್ಲಿ ನಡೆಯದಿರಲಿ ವಿಪ್ಲವ.
ಹರ್ಷದ ದಾರೆ ಉಕ್ಕಿ ಹರಿಯಲಿ ವರ್ಷವೆಲ್ಲವ.

ಮನದ ಕ್ರೋಧ ಕಿಚ್ಚುಗಳ ತೊಳೆಯಲಿ ನಗುವಿನ ಹೊಳೆ
ಬೇವಿನಲ್ಲಿ ಬೆಲ್ಲ ಬೆರೆಸಿ ಭಾವನೆಗಳನ್ನೆಲ್ಲ ಸುರಿಸಿ ಕಷ್ಟ-
ಸುಖದ ಸಂಕೇತವೆನಿಸಿ
"ಪ್ಲವ"ನ ಸ್ವಾಗತಿಸುವ.

ಕೊಂಬೆ ರೆಂಬೆ ಚಿಗುರಿ ಟೊಂಗೆ ಚೈತ್ರದಲ್ಲಿ ಯುಗದ ಆದಿ
ನಶಿಸಿಹೋದ ಜೀವ ಕಳೆಯ ಮರಳಿ ಕರೆದು ತರುವುದು.

ಮಾವು ತಳಿರ ಸೊಬಗ ಹೊತ್ತು
ಮುದದಿ ಪಿಕವು ಕೂಗಲಿ ಕಳಿತ
ಫಲದ ಕಂಪ ಹಿಡಿದು ಶುಕವು ಬಂದು ಕುಕ್ಕಲಿ.

ಹಸಿರ ಉಡುಗೆ ಧರೆಯು ಧರಿಸಿ
ಪ್ರಕೃತಿ ಮುಖದಿ ನಗೆಯು ಮಿಂಚಿ
ಕಹಿಸಿಹಿಯ ಸ್ವಾದವರಿಸಿ ಕಾವ್ಯ ಸೃಷ್ಟಿಯಾಗಲಿ.

ಗಿಡಮರದ ಹಸುರಲ್ಲಿಯ ತಂಗಾಳಿ ತೀಡಿಹುದು
ಹಕ್ಕಿ ಕಲಕಂಠದಲಿ ಸವಿಯುವುತಿಹುದು.
ವನಸಿರಿ ಹೊಂಬಣ್ಣದಾರತಿಯ
ಬೆಳಗಿಹುದು ಹರುಷದಿ ಸ್ವಾಗತಿಸಿ ಹೊಸ ವರುಷವ.

ಹಸಿರಿನ ಸಾಲಿನಲ್ಲಿ ನನ್ನ ಮನ ಕೂಡಿಸುವುದು ಪಕ್ಷಿ
ಇಂಚರದಲ್ಲಿ ದನಿಯ ಬೆರೆತು.
ಹೊಸತನದಿ ಸಿಹಿ-ಕಹಿಯ ಸ್ವಾಗತಿಸುವ ಈ ಕವಿತೆ
"ಪ್ಲವ" ಸಂವತ್ಸರದ ಭಾವಗೀತೆ.

ಬರುವ ರೋಗ ಬಾರದಿರಲಿ ಕೊರೋನಾ ಸದಾ
ದೂರವಿರಲಿ
ಮನುಕುಲಕ್ಕೆ ನೆಮ್ಮದಿ ತರಲಿ ಪರಿಸರ ಸ್ವಚ್ಛಂದವಿರಲಿ.
ಯುಗ ಯುಗಾದಿ ಬರುತ್ತಿರಲಿ
ಭಗವಂತನ ದಯೆ ಸದಾ ಇರಲಿ.

# ನ್ಯಾಯ ನಿರ್ಣಯ ಹೇಗಿರಬೇಕು...?

ತನಗೆ ಪ್ರಾಥಮಿಕ ಶಿಕ್ಷಣ ನೀಡಿದ ಗುರುಗಳನ್ನು 40 ವರ್ಷಗಳ ನಂತರ ಕಂಡ ಅವನಿಗೆ ಹರ್ಷವಾಗಿ ಗೌರವದಿಂದ ನಮಸ್ಕರಿಸಿದ. 'ಸರ್, ನನ್ನ ಗುರುತು ಸಿಕ್ಕಿತೇ? ಏಳನೇ ಕ್ಲಾಸಿನಲ್ಲಿರುವಾಗ ನಿಮ್ಮ ವಿದ್ಯಾರ್ಥಿಯಾಗಿದ್ದೆ'. 'ಓಹ್, ಹೌದಾ! ಸಂತೋಷ ವಾಯಿತು. ಈಗ ಏನು ಮಾಡುತ್ತಿರುವೆ?' 'ಡಾಕ್ಟರೇಟ್ ಮಾಡಿ ಒಳ್ಳೆ ಹುದ್ದೆಯಲ್ಲಿದ್ದೇನೆ' ಎಂದೆನ್ನುತ್ತ ಶಾಲೆಯಲ್ಲಿ ನಡೆದ ಘಟನೆಯೊಂದನ್ನು ನೆನಪಿಸತೊಡಗಿದ.

'ನಮ್ಮ ಕ್ಲಾಸಿನಲ್ಲಿ ಶ್ರೀಮಂತ ಸಹಪಾಠಿಯೊಬ್ಬ ಒಂದು ದಿನ ಕೈಗಡಿಯಾರ ಕಟ್ಟಿಕೊಂಡು ಶಾಲೆಗೆ ಬಂದ. ಆ ದಿನಗಳಲ್ಲಿ ನಿಮ್ಮನ್ನೂ ಸೇರಿದಂತೆ ಯಾರ ಹತ್ತಿರವೂ ಗಡಿಯಾರವಿರಲಿಲ್ಲ. ನನಗೆ ಅದನ್ನು ಹೇಗಾದರೂ ಮಾಡಿ ಪಡೆಯಬೇಕೆಂಬ ಇಚ್ಛೆಯಾಯಿತು. ಆಟಕ್ಕೆಂದು ಎಲ್ಲ ಹುಡುಗರನ್ನು ನೀವು ಹೊರಗಡೆ ಕರೆದೊಯ್ದಾಗ ಅವನು ಅದನ್ನು ಕಂಪಾಸ್ ಪೆಟ್ಟಿಗೆಯಲ್ಲಿ ಇಟ್ಟಿದ್ದನ್ನು ನೋಡಿದ ನಾನು ಸಮಯ ಸಾಧಿಸಿ ಜೇಬಿಗಿಳಿಸಿದೆ. ಆಟ ಮುಗಿಸಿ ಬಂದಾಗ ತನ್ನ ಗಡಿಯಾರ ಕಾಣದ್ದರಿಂದ ಅವನು ನಿಮ್ಮ ಹತ್ತಿರ ದೂರು ಹೇಳಿದ. ನೀವು ಕೂಡಲೇ ಬಾಗಿಲು ಬಂದ್ ಮಾಡಿ 'ನಿಮ್ಮಲ್ಲಿ ಯಾರಾದರೂ ಅವನ ಗಡಿಯಾರ ತೆಗೆದುಕೊಂಡಿದ್ದರೆ ಅವನಿಗೆ ಒಪ್ಪಿಸಬೇಕು. ಯಾವ ಶಿಕ್ಷೆಯನ್ನೂ ಕೊಡುವುದಿಲ್ಲ' ಎಂದಿರಿ. ಆದರೆ ಎಲ್ಲರಿಂದ ಕಳ್ಳನೆಂದೆನಿಸಿಕೊಳ್ಳಲು ಮನಸ್ಸಾಗದೆ ನನಗೆ ಅದನ್ನು ಕೊನೆಯವರೆಗೂ ತಿರುಗಿ ಕೊಡುವ ಧೈರ್ಯವಾಗಲಿಲ್ಲ. ಆಗ ನೀವು 'ಎಲ್ಲರೂ ಒಂದು ಸಾಲಿನಲ್ಲಿ ಕಣ್ಣು ಮುಚ್ಚಿ ನಿಂತುಕೊಳ್ಳಿ. ನಾನು ಎಲ್ಲರ ಕಿಸೆ ತಪಾಸಿಸುವೆ. ಅದು ಮುಗಿಯುವವರೆಗೆ ಯಾರೂ ಕಣ್ಣು ತೆಗೆಯತಕ್ಕದ್ದಲ್ಲ' ಎಂದಿರಿ. ಒಬ್ಬೊಬ್ಬರನ್ನೇ ತಪಾಸಿಸುತ್ತ ನನ್ನ ಹತ್ತಿರ ಬಂದಿರಿ. ನನ್ನ ಎದೆ ಡವಗುಡುತ್ತಿತ್ತು. ನನ್ನ ಕಿಸೆಯಿಂದ ಗಡಿಯಾರ ತೆಗೆದಿರಿ. ಹಾಗೆಯೆ ಉಳಿದವರ ಕಿಸೆಯನ್ನೂ ತಪಾಸಿಸಿ ನಂತರ ಕಣ್ತೆರೆಯಲು ಹೇಳಿದಿರಿ. ಆ ಶ್ರೀಮಂತ ಹುಡುಗನಿಗೆ ಅದನ್ನು ಕೊಟ್ಟು ಮತ್ತೆ ಅದನ್ನು ಶಾಲೆಗೆ ತರಬೇಡವೆಂದೂ, ಇದನ್ನು ಕದ್ದವರು ಇನ್ನೊಮ್ಮೆ ಇಂಥ ಕೃತ್ಯ ಮಾಡಬಾರದೆಂದೂ ಹೇಳಿ ಪಾಠ ಆರಂಭಿಸಿದಿರಿ. ಆಮೇಲೆ ಯಾರ ಮುಂದೆಯೂ ಈ ವಿಷಯವಾಗಿ ಮಾತೆತ್ತಲಿಲ್ಲ. ಇವತ್ತಿನವರೆಗೆ ನನಗೆ ಬಯ್ದಿಲ್ಲ. ಅಂದಿನಿಂದ ನೀವೇ ನನಗೆ ಆದರ್ಶ'. ಆಗ ಆ ವೃದ್ಧ ಗುರುಗಳು – 'ಓಹೋ, ಅವನು ನೀನೇನಾ? ಇಲ್ಲಿಯವರೆಗೆ ನನಗೆ ಇದು ಗೊತ್ತೇ ಇರಲಿಲ್ಲ. ಯಾಕೆಂದರೆ ಎಲ್ಲರ ಜೇಬು ತಪಾಸಿಸುವವರೆಗೆ ನಾನು ಸಹ ಕಣ್ಣು ಮುಚ್ಚಿಕೊಂಡೇ ಇದ್ದೆ'. ಅವರ ವಿಶಾಲ ದೃಷ್ಟಿಯ ಅರಿವಾಗಿ ಅವನ ಕಣ್ಣು ಒದ್ದೆಯಾದವು.

ಬೇರೆಯವರಲ್ಲಿಯ ಒಳ್ಳೆಯ ಗುಣಗಳನ್ನೆಂದೂ ಪರಿಗಣಿಸದ ನಾವು ದೌರ್ಬಲ್ಯಗಳನ್ನು ಮಾತ್ರ ಬೇಗನೆ ಗುರುತಿಸಿ 'ನಾನೇ ಅವನ ತಪ್ಪನ್ನು ಕಂಡುಹಿಡಿದೆ' ಎಂದು ಬಡಾಯಿ ಕೊಚ್ಚಿಕೊಳ್ಳುತ್ತೇವೆ. ಆದರೆ ತಕ್ಕಡಿ ಹಿಡಿದ ನ್ಯಾಯದೇವತೆ, ತನ್ನ ನಿರ್ಣಯ ಯಾವುದೇ ವ್ಯಕ್ತಿ ಬಗ್ಗೆ ಅನುರಾಗ ಅಥವಾ ದ್ವೇಷಗಳಿಂದ ಕೂಡಿರದೆ, ಕೇವಲ ವಿಷಯ ಅಥವಾ ಘಟನೆಗೆ ಮಾತ್ರ ಸಂಬಂಧಿಸಿದ್ದಾಗಿದೆ ಎಂದು ಸೂಚಿಸಲು ಕಣ್ಣಿಗೆ ಕರಿಬಟ್ಟೆ ಕಟ್ಟಿಕೊಂಡಿರುತ್ತಾಳೆ. ಬೇರೆಯವರ ಜೊತೆ ತಾತ್ವಿಕ ಮತಭೇದಗಳ ಇರಬಹುದು. ಆದರೆ ಅವು ಅಹಂಕಾರಕ್ಕೆ ರೂಪಾಂತರವಾಗಿ ಶತ್ರುತ್ವಕ್ಕೆ ಕಾರಣವಾಗಬಾರದು. ನಾವೆಲ್ಲ ಬರುವಾಗ ಒಂದೇ ಹೃದಯವನ್ನು ಪಡೆದುಕೊಂಡು ಬಂದಿದ್ದರೂ ಹೋಗುವಾಗ ಒಂದಿಷ್ಟು ಬೇರೆ ಹೃದಯಗಳಲ್ಲಿಯೂ ಸ್ಥಳ ದೊರಕಿಸಿಕೊಂಡರೆ ಅದೂ ಒಂದು ಸಾಧನೆ ಅಲ್ಲವೇ?

ಕೃಪೆ : ವಿಜಯವಾಣಿ

## 'ಇರುವುದೊಬ್ಬನೇ'

ಸಾವಿರ ಕೋಟಿ ಜನರಿದ್ದರೂ
ಅವರೆಲ್ಲರೂ ಒಡೆದ ಕನ್ನಡಿಯ ಬಿಂಬ
ಒಬ್ಬೊಬ್ಬರಾಗಿ ನೋಡಿದರೆ ಅಲ್ಲ ಇಲ್ಲ
ಎಲ್ಲದರಲ್ಲಿಯೂ ಅವರದೇ ಪ್ರತಿಬಿಂಬ
ಮುಕ್ಕೋಟಿ ದೇವರಿದ್ದರೂ ಕಾಯುವುದು
ಎಲ್ಲರನೂ ಒಬ್ಬ
ಅವರು ಇವರು ಬೇಕೆಂದರು ತನಗೊಬ್ಬ
ಸರಿಕಟಕ್ಕೂ, ಹರಿದಿನ ಹಬ್ಬಕ್ಕೂ ಒಬ್ಬೊಬ್ಬ

ಹರಿದಾಸ ಸದಾಶಿವಭಟ್ಟ

# ಪೂಜ್ಯ ಪುತ್ತಿಗೆ ಶ್ರೀಯವರಿಗೆ ಗೌರವ ಡಾಕ್ಟರೇಟ್




ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶ್ರೀ ಪುತ್ತಿಗೆ ಮಠದ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರಿಗೆ ಮಂಗಳೂರಿನ ಪ್ರತಿಷ್ಠಿತ ಶ್ರೀನಿವಾಸ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿದೆ. ದಿನಾಂಕ 17.4.2021 ರಂದು ನಡೆದ ವಿಶ್ವವಿದ್ಯಾಲಯದ ತೃತೀಯ ವಾರ್ಷಿಕ ಘಟಿಕೋತ್ಸವ ಸಂದರ್ಭದಲ್ಲಿ ಪೂಜ್ಯ ಶ್ರೀಗಳು ಜಗತ್ತಿನಲ್ಲೆಡೆ ಕೃಷ್ಣಮಂದಿರಗಳನ್ನು ಸ್ಥಾಪಿಸಿ, ಜಗದ್ಗುರುಗಳಾದ ಶ್ರೀ ಮಧ್ವಾಚಾರ್ಯರ ಭಕ್ತಿ ಸಿದ್ಧಾಂತವನ್ನು ವಿಶ್ವದೆಲ್ಲೆಡೆ ಪ್ರಚಾರ ನಡೆಸುತ್ತಿರುವುದಲ್ಲದೆ, ವಿಶ್ವ ಧಾರ್ಮಿಕ ನಾಯಕರ ಒಕ್ಕೂಟದ ಅಧ್ಯಕ್ಷರಾಗಿ ಎಲ್ಲಾ ಮತಗಳ ಸಮನ್ವಯತೆಯನ್ನು ಸಾಧಿಸಿದ ಹಿರಿಮೆಯನ್ನು ಪರಿಗಣಿಸಿ, ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್‌ನ್ನು ನೀಡಿರುತ್ತದೆ. ಘಟಿಕೋತ್ಸವದಲ್ಲಿ ಅನುಗ್ರಹ ಭಾಷಣ ಮಾಡಿದ ಶ್ರೀಗಳು ಶ್ರೀನಿವಾಸನ ಹೆಸರಿನಿಂದ ಬೆಳಗುತ್ತಿರುವ ವಿಶ್ವವಿದ್ಯಾಲಯವು ಮಹತ್ತರ ಸಾಧನೆಯನ್ನು ಮಾಡುವಂತಾಗಲಿ ಎಂದು ಹರಸಿದರು. ಈ ಹೆಮ್ಮೆಯ ಸಂದರ್ಭದಲ್ಲಿ ಪೂಜ್ಯ ಪುತ್ತಿಗೆ ಶ್ರೀಯವರಿಗೆ ಆನಂದ ಬಳಗದ ಪ್ರಣಾಮಪೂರ್ವಕ ಅಭಿನಂದನೆಗಳು.

# ಸದಸ್ಯರಲ್ಲಿ ಮನವಿ

**ಆನಂದ ಬಳಗದ ತ್ರೈಮಾಸಿಕ ಪತ್ರಿಕೆಯನ್ನು ಸದಸ್ಯರಿಗೆ ಬಳಗದಲ್ಲಿ ಲಭ್ಯವಿರುವ ವಿಳಾಸದ ಪ್ರಕಾರ ಕಳುಹಿಸಲಾಗುತ್ತಿದೆ. ಆದರೆ ಪ್ರತಿ ಬಾರಿಯೂ ಕೆಲವೊಂದು ಪ್ರತಿಗಳು ವಿಳಾಸ ಪತ್ತೆಯಾಗದೆ ವಾಪಾಸು ಬರುತ್ತಿವೆ. ಸದಸ್ಯರು ತಮ್ಮ ಮನೆಯ ವಿಳಾಸಗಳನ್ನು ಬದಲಿಸಿದ್ದು, ಹೊಸ ವಿಳಾಸವನ್ನು ಬಳಗಕ್ಕೆ ನೀಡದಿರುವುದು ಇದಕ್ಕೆ ಮುಖ್ಯ ಕಾರಣ. ನಮ್ಮ ತಂಡವು ಹಿಂದೆ ಬಂದಿರುವ ಭೃಗುವಾಣಿಲ್ಲಿರುವ ಸದಸ್ಯರ ವಿಳಾಸವನ್ನು ಆಧರಿಸಿ, ಹೊಸ ವಿಳಾಸವನ್ನು ತಿಳಿದುಕೊಳ್ಳುವ ಬಗ್ಗೆ ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಕೆಲವು ಸಲ ಯಶಸ್ವಿಯೂ ಆಗಿದೆ.**

**ಸದಸ್ಯ ಬಾಂಧವರಲ್ಲಿ ನಮ್ಮ ವಿನಂತಿಯೇನೆಂದರೆ, ತಮಗೆ ಪರಿಚಯವಿರುವ ಸದಸ್ಯರು ತಮ್ಮ ಮನೆಯ ವಿಳಾಸವನ್ನು ಬದಲಿಸಿರುವುದು ತಮಗೆ ತಿಳಿದಿದ್ದರೆ, ತಮ್ಮ ಗಮನಕ್ಕೆ ಬಂದಿದ್ದರೆ, ಅವರ ಹೆಸರು, ಹೊಸ ವಿಳಾಸ ಅಥವಾ ಅವರ ಮೊಬೈಲ್ ಸಂಖ್ಯೆಯನ್ನು ನಮಗೆ ತಿಳಿಸಿರಿ. ಅಂತಹ ಸದಸ್ಯರ ಸರಿಯಾದ ವಿಳಾಸವನ್ನು ತಿಳಿದು, ನಮ್ಮಲ್ಲಿರುವ ವಿಳಾಸ ಪಟ್ಟಿಯನ್ನು ಪರಿಷ್ಕರಿಸಲು ಇದರಿಂದ ಅನುಕೂಲ. ಜೊತೆಗೆ ಅವರಿಗೆ ಭೃಗುವಾಣಿಯೂ ತಲುಪುತ್ತದೆ. ವಿಳಾಸ ತಿಳಿಯದೆ ಹಿಂದೆ ಬರುವ ಪ್ರತಿಗಳ ಸಂಖ್ಯೆಯೂ ಕಡಿಮೆ ಆಗುತ್ತದೆ.**

**ಹಾಗೇನೇ ಸದಸ್ಯರು ತಮ್ಮ ವಿಳಾಸವನ್ನು ಬದಲಿಸಿದಾಗ ದಯವಿಟ್ಟು ನಮಗೆ ದೂರವಾಣಿ/ವಾಟ್ಸಾಪ್ ಮೂಲಕ ತಿಳಿಸಬೇಕಾಗಿ ಕೋರಿಕೆ.**

**ದಿನೇಶ್‌ರಾವ್ ಎಂ.**
**ಸಂಚಾಲಕರು, ಮಾಧ್ಯಮ ಮತ್ತು ಸಂವಹನ ಸಮಿತಿ**
**(ಮೊಬೈಲ್ : 99845688955)**

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

## HOTEL AJANTHA GROUP OF HOSPITALITY SERVICES

# HOTEL AJANTHA

***A Boarding and Lodging Hotel of repute with spacious place for parking Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With best compliments*

# FIRETECH
## BOILERS PRIVATE LTD.

(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com Website : www.firetechboilers.com

## Manufacturing Steam Boilers (IBR & Non IBR)

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,






ಗೃಹ ಹಾಗೂ ವಾಹನ ಸಾಲ
ಕೊಳ್ಳಲು ಸುಲಭ ಕೀಲಿ ಕೈ
ಕೆಬಿಎಲ್ ಅಪ್ನಾ ಘರ್ &
ಕೆಬಿಎಲ್ ಕಾರು ಸಾಲ
ಷರತ್ತುಗಳು ಅನ್ವಯ
ಕೂಡಲೇ ಆಕರ್ಷಕ ರಿಯಾಯಿತಿಗಳ ಲಾಭವನ್ನು ಪಡೆಯಿರಿ
ಡಿಜಿಟಲ್ ಸಾಲ ಗಳಿಗೆ
ಬಡ್ಡಿ ದರಗಳ ಮೇಲೆ
0.10%
ಹೆಚ್ಚುವರಿ ರಿಯಾಯಿತಿ
ಡಿಜಿಟಲ್ ಮಂಜೂರಾತಿ ಗಳಿಗೆ
ಸಂಸ್ಕರಣಾ ವೆಚ್ಚಗಳ ಮೇಲೆ
25%
ಹೆಚ್ಚುವರಿ ರಿಯಾಯಿತಿ
ಈ ರಿಯಾಯಿತಿಗಳು
ಪಿಎಂಎವೈ ಸ್ಕೀಂ
ಡಿಜಿಟಲ್ ಮಂಜೂರಾತಿ
ಗಳಿಗೂ ಲಭ್ಯ
ಅತ್ಯಾಕರ್ಷಕ
ಬಡ್ಡಿದರಗಳು
ತಕ್ಷಣವೇ ಸಾಲ
ಮೊತ್ತ ಮಂಜೂರಾತಿ
ಅತ್ಯಂತ ಸರಳ
ಪ್ರಕ್ರಿಯೆ
Follow us on : / KarnatakaBank
ಕರ್ಣಾಟಕ ಬ್ಯಾಂಕ್
CIN: L85110KA1924PLC001128

# FRIDGE HOUSE

Distributor & Dealer for

**HAVELLS Brand (Lloyd) AC's & CARRIER MIDEA Air Conditioners**



Split AC



Cassette AC



Tower AC



Window AC



Ductable AC

**Contact Persons: Mr. M K Prasad & Mr. B Krishnaswamy – M: 9845330571**

# FRIDGE HOUSE

FRIDGE HOUSE DELIVERING TRUST

EMERSON Climate Technologies AUTHORIZED FULL-LINE WHOLESALER

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Kirloskar Enriching Lives

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net

**Contact Persons: M.K. Prasad & Mr. Nagesh D Prabhu – M: 9845217197**

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

**ನಮ್ಮ ವಿಶೇಷತೆಗಳು**

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# ಹೋಟೆಲ್ ಶೀತಲ್

**ಆನಂದರಾವ್ ವೃತ್ತ, ಬೆಂಗಳೂರು – 560 009**

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

### ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

*With Best Compliments from :*

# P.C. RAO

## RAO IDEAL SERVICES PRIVATE LIMITED

Specialists in
Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

### Services Offered :

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:
MR. DINESH RAO MUNDRUPPADY MOB: 99456 88955
MR. VASUDEVAN T S MOB: 98450 26743
MR. VIJAY KUMAR KULKARNI MOB: 99456 96649

Estd. : 1917

ಸ್ಥಾಪನೆ : 1917

ದೇವ–ದಾನವರು ಅಮೃತಕ್ಕೋಸ್ಕರ ಕ್ಷೀರಸಾಗರವನ್ನು ಮಥನ ಮಾಡಿದಾಗ
ಜನಿಸಿದ ವಸ್ತುಗಳಲ್ಲಿ ಶಂಖವೂ ಒಂದು ಎಂದು ಪುರಾಣ ಹೇಳುತ್ತದೆ.

104 ವರ್ಷಗಳ ಸಹಕಾರ ಸೇವೆಯಲ್ಲಿ....

# ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿ ನಿ.

Regd. Office : No.1067, Pattabhi Rama Shastry Lane, Ulsoorpet, Bengaluru - 560 002.
Admn. Office : No.15 & 15/1, above Canara Bank (Syndicate Bank)
1st Main, N.R. Colony, Benagaluru - 560 019

ಶಾಖೆಗಳು: Ulsoorpet | Basavanagudi | Bank Colony - Srinivasa Nagar | Rajajinagar

WE PAY

**ATTRACTIVE INTEREST RATES ON DEPOSITS**

Extra to our Senior Citizen Members

We Have Deposits Schemes to Suit your Investment

ನಮ್ಮಲ್ಲಿ **ಚಿನ್ನಾಭರಣ ಸಾಲ ಮತ್ತು ಶ್ರೀರಾಮ ನಿವಾಸ್ – ಗೃಹಸಾಲ ಯೋಜನೆ**

ಭದ್ರತಾಸಾಲ ಕಡಿಮೆ ಬಡ್ಡಿಯಲ್ಲಿ ದೊರೆಯುತ್ತದೆ.

We Allolw

**INTEREST REBATE ON REGULAR REPAYMENT OF LOANS**





Locker Facility Available - ಭದ್ರತಾ ಕಪಾಟು ದೊರೆಯುತ್ತದೆ.

ಉರುವಲಿನಲ್ಲಿ ಬೆಂಕಿ ಇರುವುದನ್ನು ತಿಳಿದವನು ಜ್ಞಾನಿ. ಆ ಬೆಂಕಿಯನ್ನು ಬಳಸಿಕೊಂಡು
ಅಡುಗೆ ತಯಾರಿಸಿದವನು ವಿಜ್ಞಾನಿ – ರಾಮಕೃಷ್ಣ ಪರಮಹಂಸರು

# ಎನ್.ಆರ್. ನಾರಾಯಣರಾಯರಿಗೆ ನುಡಿನಮನ



ಆನಂದ ಬಳಗದ ಉಪಾಧ್ಯಕ್ಷರಾಗಿ ಎರಡು ಅವಧಿಯಲ್ಲಿ ಬಳಗಕ್ಕೆ ಅಪಾರ ಸೇವೆ ಸಲ್ಲಿಸಿದ್ದ ಬಳಗದ ಹಿತೈಷಿ ಮತ್ತು ಪೋಷಕರಾಗಿದ್ದ ಶ್ರೀ ಎನ್.ಆರ್. ನಾರಾಯಣ ರಾವ್ ರವರು ದಿ. 11.1.2021 ರಂದು ನಿಧನರಾಗಿದ್ದು, ಆನಂದ ಬಳಗ, ದಕ್ಷಿಣಕನ್ನಡಿಗರ ಸಂಘ ಮತ್ತಿತರ ಸಂಸ್ಥೆಗಳ ಸಹಯೋಗದಲ್ಲಿ ದಿ.26.1.2021 ರಂದು ನುಡಿ ನಮನ ಕಾರ್ಯಕ್ರಮವನ್ನು ಸಂಯೋಜಿಸಲಾಗಿತ್ತು. ಹೋಟೆಲ್ ಡ್ಯೂ ಡ್ರಾಪ್‌ನಲ್ಲಿ ನಡೆದ ಮಾತಿನ ನಮನ ಕಾರ್ಯಕ್ರಮದಲ್ಲಿ ಕೆ.ಪಿ.ಹೆಚ್.ಆರ್.ಎ.ನ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ಹೆಬ್ಬಾರ್, ದ.ಕ.ಸಂಘದ ಉಪಾಧ್ಯಕ್ಷರಾದ ಡಾ. ಕೆ.ಸಿ. ಬಲ್ಲಾಳ್ ಆನಂದ ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ತುಳುಕೂಟದ ಅಧ್ಯಕ್ಷರಾದ ಶ್ರೀ ದೇವೇಂದ್ರ ಹೆಗ್ಡೆ, ತುಳುವೆರೆಂಕ್ಲು ಅಧ್ಯಕ್ಷರಾದ ಶ್ರೀ ಪಳ್ಳಿ ವಿಶ್ವನಾಥ ಶೆಟ್ಟಿ, ತುಳುವೆರೆ ಚಾವಡಿಯ ಅಧ್ಯಕ್ಷರಾದ ಶ್ರೀ ಆಶಾನಂದ ಕುಲಾಲ್, ಕುಲಾಲ ಸಂಘದ ಗೌರವಾಧ್ಯಕ್ಷರಾದ ಶ್ರೀ ಪುರುಷೋತ್ತಮ ಚೇಂಡ್ಲ, ಜೈನ್ ಸಂಘದ ಅಧ್ಯಕ್ಷರಾದ ಶ್ರೀ ಹರ್ಷೇಂದ್ರ ಜೈನ್, ಬಿ.ಬಿ.ಹೆಚ್.ಎ.ನ. ಅಧ್ಯಕ್ಷರಾದ ಶ್ರೀ ಪಿ.ಎಸ್. ರಾವ್, ಹೋಟೆಲ್ ಉದ್ಯಮದಾರರ ಸಹಕಾರ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ನಾಗರಾಜ ಧನ್ಯರವರು ಶ್ರೀ ನಾರಾಯಣ ರಾಯರ ಒಡನಾಟ ಮತ್ತು ಸಂಘ–ಸಂಸ್ಥೆಗಳ ಮುನ್ನಡೆಗೆ ಅವರು ನೀಡಿದ ಕೊಡುಗೆ ಬಗ್ಗೆ ಮನದುಂಬಿ ವಿವರಿಸಿ, ಗೌರವದ ನುಡಿನಮನ ಸಲ್ಲಿಸಿದರು.

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್, ಪೂರ್ಣಪ್ರಜ್ಞ ವಿದ್ಯಾಪೀಠದ ಕಾರ್ಯದರ್ಶಿ ವಿದ್ವಾನ್ ಯು. ಕೇಶವಾಚಾರ್ಯ ಐ–ಲೇಸ ಸಂಸ್ಥೆಯ ಪರವಾಗಿ ಡಾ.ಕೆ.ನ್. ಅಡಿಗ ಅಡೂರು ನಾರಾಯಣರಾಯರ ಒಡನಾಡಿ ಶ್ರೀ ಮಟ್ಟಿ ರಾಮಚಂದ್ರ ರಾವ್ ಕೂಡ ದಿವಂಗತ ನಾರಾಯಣ ರಾಯರ ಗುಣಗಾನದ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಎನ್.ಆರ್.ಎನ್. ಕುಟುಂಬದ ಪರವಾಗಿ ಶ್ರೀ ಟಿ.ಎನ್. ರಾಘವೇಂದ್ರ ರಾವ್ ಹಾಗೂ ಶ್ರೀಧರ ರಾವ್‌ರವರು ಮನದಾಳದ ಮಾತನ್ನು ಆಡಿ ನಾರಾಯಣರಾಯರಿಗೆ ಗೌರವ ಅರ್ಪಿಸಿದರು. ದ.ಕ. ಸಂಘದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಎಲ್ಲ ಸಂಘ–ಸಂಸ್ಥೆಗಳಿಗೆ ಅತ್ಯಂತ ಬೇಕಾದವರು ಆಗಿದ್ದ ನಾರಾಯಣ ರಾಯರ ನಿಧನದಿಂದ ಸಮಾಜಕ್ಕೆ ಅಪಾರವಾದ ನಷ್ಟವಾಗಿದೆ. ಅವರ ಜೀವನಾದರ್ಶ ಗಳನ್ನು ನಾವು ತುಸು ಮಟ್ಟಿಗಾದರೂ ಪಾಲಿಸು ವಂತಾದರೆ ಅದೇ ಅವರಿಗೆ ನಾವು ನೀಡುವ ಸ್ಮರಣಾಂಜಲಿ ಎಂದು ನುಡಿದರು. ಕಾರ್ಯಕ್ರಮದ ಮೊದಲಿಗೆ ಆನಂದಬಳಗದ ಕಾರ್ಯದರ್ಶಿ ಶ್ರೀ ಎಂ.ಕೆ. ಗುರುಮೂರ್ತಿ ಸ್ವಾಗತಿಸಿದರೆ, ಕೊನೆಯಲ್ಲಿ ದ.ಕ. ಸಂಘದ ಕಾರ್ಯದರ್ಶಿ ಶ್ರೀ ವೈ. ಜಯಂತರಾವ್ ವಂದನಾರ್ಪಣೆ ಮಾಡಿದರು. ಶ್ರೀ ನಾರಾಯಣ ರಾಯರ ಸುಪುತ್ರರಾದ ಶ್ರೀ ರಾಘವೇಂದ್ರ ರಾವ್, ಶ್ರೀ ಶ್ರೀನಿವಾಸ ರಾವ್ ಹಾಗೂ ಎನ್.ಆರ್.ಎನ್. ರವರ ಆಪ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಆನಂದಬಳಗದ ಮಹಿಳಾ ವಿಭಾಗದ ಕಲಾವಿದರಾದ ಶ್ರೀಮತಿಯವರಾದ ವಿಜಯಲಕ್ಷ್ಮಿ ಉಪಾಧ್ಯ, ಮಾಲಿನಿ ಜಯಂತರಾವ್, ಶೋಭಾ ರಾಧಾಕೃಷ್ಣ ಮತ್ತು ವಿಜಯಾ ಭಟ್‌ರವರು ಭಕ್ತಿಗೀತೆ ಗಳನ್ನು ಹಾಡಿರುವುದು ಸಮಯೋಚಿತವಾಗಿತ್ತು.

# ಕೊಲೆಸ್ಟ್ರಾಲ್ : ಕೊಲೆಪಾತಕಿಯೇ?

ಉಡುಪಿಯ ಹೆಸರಾಂತ ಹೃದಯತಜ್ಞ ಡಾ॥ ಬೆಳ್ಳೆ ಮೋನಪ್ಪ ಹೆಗ್ಗಡೆಯವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ವೈದ್ಯರ ಸಾಲಿನಲ್ಲಿ ನಿಲ್ಲುವ ವಿರಳ ವೈದ್ಯರಲ್ಲಿ ಅಗ್ರಗಣ್ಯರು. ಮಣಿಪಾಲ ವೈದ್ಯಕೀಯ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು, ಉತ್ತಮ ಬರಹಗಾರರು, ಅದ್ಭುತ ಭಾಷಣಕಾರರು, ನಿಷ್ಠುರವಾದಿಗಳು, ಕನ್ನಡ ಪ್ರೇಮಿ, ಏಳು ಭಾಷೆಗಳಲ್ಲಿ ಮಾತನಾಡಬಲ್ಲ ಮಹಾ ವಾಗ್ಮಿ, ಕನ್ನಡ ಮತ್ತು ಇಂಗ್ಲೀಷಿನಲ್ಲಿ ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ ವೈದ್ಯವಿಜ್ಞಾನಿ. ಇವರಿಗೆ ಅನೇಕ ಪ್ರಶಸ್ತಿಗಳು ಅರಸಿಕೊಂಡು ಬಂದಿವೆ. ರಾಷ್ಟ್ರೀಯ ಪ್ರತಿಷ್ಠಿತವಾದ 'ಪದ್ಮಭೂಷಣ' 'ಪದ್ಮ ವಿಭೂಷಣ' 'ಕನ್ನಡ ರತ್ನ' ಇನ್ನೂ ಅನೇಕ.

ನಮ್ಮ ಹೆಗ್ಗಡೆಯವರ ಭಾಷಣ ಕೇಳಿದವರಿಗೆ ಅಥವಾ ಓದಿದವರಿಗೆ ಅವರ ಕ್ರಮವನ್ನು ಅನುಸರಿಸಿದರೆ ಖಂಡಿತ ಖಾಯಿಲೆ ದೂರವಾಗುತ್ತದೆ ಎಂಬ ನಂಬಿಕೆ ಬರುತ್ತದೆ.

ಈ ಹೃದಯವಂತ ಬಿ.ಎಂ. ಹೆಗ್ಗಡೆಯವರ ಒಂದು ಲೇಖನ ಇಲ್ಲಿದೆ. ದಯವಿಟ್ಟು ಓದಿ–ಅನುಸರಿಸಿ ಹೌದೆನಿಸಿದರೆ !

### 'ಕೊಲೆಸ್ಟ್ರಾಲ್ – ಇದು ಔಷಧಿ ಕಂಪೆನಿಗಳ ಮಾಫಿಯಾ ಭೂತ"

ಕೊಲೆಸ್ಟ್ರಾಲ್ ಎಂದರೆ FAT ಇದು ಮೂಲಭೂತ ಅಗತ್ಯ. ನಾವು ತಿನ್ನುವ ಆಹಾರದಲ್ಲಿ ಶೇ.10 ಆಹಾರ ಕೊಲೆಸ್ಟ್ರಾಲ್ ಆಗಿ ಮಾರ್ಪಡುತ್ತದೆ. ಉಳಿದಂತೆ ನಮ್ಮ ದೇಹ ತನಗೆ ಬೇಕಾದಷ್ಟು ಕೊಲೆಸ್ಟ್ರಾಲನ್ನು ತಾನೇ ಉತ್ಪಾದಿಸಿಕೊಳ್ಳುತ್ತದೆ. ನಮ್ಮ ದೇಹಕ್ಕೆ ಕೊಲೆಸ್ಟ್ರಾಲ್ ಆಹಾರ, ನೀರಿಗಿಂತ ಹೆಚ್ಚು ಅಗತ್ಯ. ಇದು ಇಲ್ಲವಾದರೆ ಮನುಷ್ಯ ಸತ್ತೇಹೋಗುತ್ತಾನೆ ! ದೇಹದಲ್ಲಿ 120 ಟ್ರಿಲಿಯನ್ ಕಣಗಳಿವೆ. ಕೆಲವು ಮಿಲಿಯ ಕಣಗಳು ಆಯುಷ್ಯ ಮುಗಿಸಿ ಪ್ರತಿದಿನ ಸಾಯುತ್ತವೆ. ಪ್ರತಿ ಕ್ಷಣ ಹುಟ್ಟಬೇಕಾದರೆ, ಆ ಕಣದ ಆರೋಗ್ಯ ರಕ್ಷಣೆ ಆಗಬೇಕಾದರೆ ಕೊಲೆಸ್ಟ್ರಾಲ್ ಬೇಕೇಬೇಕು. ಲಿವರ್‌ನಲ್ಲಿ ಕೊಲೆಸ್ಟ್ರಾಲ್ ಸೃಷ್ಟಿಯಾಗುತ್ತದೆ. ಒತ್ತಡ ಹೆಚ್ಚಾದಾಗ ಅದರ ನಿವಾರಣೆಗೆ ಕೊಲೆಸ್ಟ್ರಾಲ್ ಬೇಕು. ದೇಹದ ಹಾರ್ಮೋನುಗಳು ಸರಿಯಾಗಿ ಕೆಲಸ ಮಾಡಬೇಕಾದರೂ ಕೊಲೆಸ್ಟ್ರಾಲ್ ಬೇಕೇಬೇಕು.

ಕೊಲೆಸ್ಟ್ರಾಲ್‌ನ್ನು ಒಳ್ಳೆಯ ಕೊಲೆಸ್ಟ್ರಾಲ್, ಕೆಟ್ಟ ಕೊಲೆಸ್ಟ್ರಾಲ್ ಎಂಬುದಿಲ್ಲ. ಮನುಷ್ಯರು ಮಾಡಿಕೊಂಡ ಜಾತಿಯಂತೆ ಇದೂ ಕೂಡ ಕೃತಕ. ಔಷಧ ಕಂಪೆನಿಗಳು ಹಣ ಮಾಡಲು 'ಹುಟ್ಟುಹಾಕಿದ ನಂಬಿಕೆ' ಇದು

ರಕ್ತದಲ್ಲಿರುವ ಕೊಲೆಸ್ಟ್ರಾಲ್ ನಾವು ತಿಂದು ಬರುವುದಲ್ಲ. ಶೇ.10 ಮಾತ್ರ ತಿಂದ ಆಹಾರದಿಂದ ಬರುತ್ತದೆ. 300 ಮಿ.ಗ್ರಾಂ. ಕೊಲೆಸ್ಟ್ರಾಲ್ ಇದ್ದರೆ ಅದನ್ನು ಕಡಿಮೆ ಮಾಡಬೇಕೆಂದು ನೀವು ಹುಲ್ಲು ತಿಂದರೂ 275 ಕ್ಕಿಂತ ಕಡಿಮೆ ಆಗುವುದಿಲ್ಲ. ಕೊಲೆಸ್ಟ್ರಾಲ್ ಶತ್ರುವಲ್ಲ–ಮಿತ್ರ ಎಂದು ನಂಬಿ. ಇದು ಖಾಯಿಲೆಯೂ ಅಲ್ಲ. ನಾನಿದನ್ನು 45 ವರುಷಗಳಿಂದ ಹೇಳುತ್ತಲೇ ಬಂದಿದ್ದೇನೆ. ಈಗ ಇದನ್ನು ಅಮೆರಿಕದವರು ಒಪ್ಪಿಕೊಂಡಿದ್ದಾರೆ. ಸಿಟ್ಟು, ಆಕ್ರೋಶ, ದ್ವೇಷ ಹೆಚ್ಚಿದಾಗ ಸ್ಟಿರಾಯ್ಡ್ ಲವೆಲ್ ಹೆಚ್ಚಿ ಕೊಲೆಸ್ಟ್ರಾಲ್ ಹೆಚ್ಚಾಗುತ್ತದೆ. ಸರೀ ತಿನ್ನಬೇಕು, ಧರ್ಮಕ್ಕೆ ಸಿಕ್ಕಿದರೆ ಮತ್ತಷ್ಟು ತಿನ್ನಬೇಕು ಎಂಬ ವಾಂಛೆಯಿಂದ ಕೊಲೆಸ್ಟ್ರಾಲ್ ಹೆಚ್ಚುತ್ತದೆ. ಆಹಾರ ಹಿತಮಿತವಾಗಿರಲಿ. "ಹಿತ ಭುಕ್, ಮಿತ ಭುಕ್, – ಕೋ ರುಕ್?" – ಚರಕ. ಹಿತಮಿತವಾಗಿ ಉಂಡವನಿಗೆ ರೋಗವೆಲ್ಲಿಯದು?

ಕೊಲೆಸ್ಟ್ರಾಲ್ ಕಡಿಮೆ ಮಾಡಿಕೊಳ್ಳಲು ದ್ವೇಷಿಸದೇ, ಆಕ್ರೋಶ ಪಡದೇ ಸಿಟ್ಟು ಮಾಡದೇ ಇರುವುದನ್ನು ರೂಢಿಮಾಡಿಕೊಳ್ಳಬೇಕು. ಪ್ರತಿದಿನ ವ್ಯಾಯಾಮ, ನಡಿಗೆ ಮಾಡಬೇಕು. ನಮಗೆ ಎಷ್ಟು ಬೇಕೋ ಅಷ್ಟಕ್ಕಿಂತ ಒಂದು ತುತ್ತು ಕಡಿಮೆ ತಿನ್ನಬೇಕು.

ಕೊಲೆಸ್ಟ್ರಾಲ್‌ಗೆ ಮದ್ದು ತೆಗೆದುಕೊಂಡರೆ ಅದರಲ್ಲಿ ಯಾವ ಪರಿಣಾಮವೂ ಆಗುವುದಿಲ್ಲ. ಇಡೀ ದೇಹದ ವ್ಯವಸ್ಥೆ ಹಾಳಾಗುತ್ತದೆ. ಇದಕ್ಕೆ ಔಷಧ ಪಡೆಯುವುದು ಮೂರ್ಖತನ. ಆದರೆ ವೈದ್ಯರು ಕೊಲೆಸ್ಟ್ರಾಲ್ ಇದೆ ಎಂದಾಕ್ಷಣ ಮದ್ದು ಬರೆದುಕೊಡುತ್ತಾರೆ. ಇದಕ್ಕೆ ಕಾರಣ ಔಷಧ ಕಂಪೆನಿಗಳು. ರೋಗಿಗೆ ಇದೇ ಮದ್ದು ನೀಡಬೇಕು ಎಂದು ಬರೆಸುವುದು ಕೂಡ ಇದೇ ಔಷಧ ಕಂಪೆನಿಗಳು. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ಒಂದು ಸಮೀಕ್ಷೆ ನಡೆಯಿತು.

ವೃದ್ಧಾಶ್ರಮವೊಂದರ 80–90 ವಯಸ್ಸಿನ ವೃದ್ಧರಲ್ಲಿದ್ದ ಕೊಲೆಸ್ಟ್ರಾಲ್‌ನ್ನು ಪರಿಶೀಲನೆ ಮಾಡಿದಾಗ 800–900

ಮಿಲಿ ಗ್ರಾಂ. ಇತ್ತು. ಸತ್ಯವೇನೆಂದರೆ ಅಷ್ಟು ಕೊಲೆಸ್ಟ್ರಾಲ್ ಇದ್ದ ಕಾರಣಕ್ಕೇ ಅವರು ಅಷ್ಟು ವರ್ಷ ಬದುಕಿದ್ದರು !

ದೇಹದಲ್ಲಿ ಕೊಲೆಸ್ಟ್ರಾಲ್ ಪ್ರಮಾಣ 150 ರಿಂದ 200 ಮಿ.ಗ್ರಾಂ. ಇರಬೇಕು. ಆದರೆ ಈಗ ಮಿತಿಯನ್ನು 180ಕ್ಕೆ ವೈದ್ಯರೇ ಇಳಿಸಿದ್ದಾರೆ. ಇದರಿಂದಾಗಿ ವಿಶ್ವದಲ್ಲಿ ಕೋಟ್ಯಾಂತರ ಮಂದಿ ರೋಗಿಗಳ ಪಟ್ಟಿಗೆ ಸೇರುತ್ತಾರೆ. ಇದರಿಂದ ಮದ್ದು ಮಾರಾಟ ಹೆಚ್ಚಾಗುತ್ತದೆ. ಇದರ ಲಾಭ ಕಂಪೆನಿಗಳಿಗೆ ಮತ್ತು ವೈದ್ಯರಿಗೆ? ಇದರಿಂದ ಕೊಲೆಸ್ಟ್ರಾಲ್ ಕಡಿಮೆ ಮಾಡುವ ಔಷಧ ತಯಾರಿಕಾ ಕಂಪೆನಿಗಳ ಲಾಭ 13 ಬಿಲಿಯನ್ ಡಾಲರ್ ಬಂದಿದೆ ! ಅದಕ್ಕೆ ನಮ್ಮ ಹೆಗ್ಗಡೆಯವರ ಒಂದು ಶ್ಲೋಕವನ್ನು ಉದಾಹರಿಸುತ್ತಾರೆ :

**"ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ**
**ಯಮಸ್ತು ಹರಕೇ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿಚ ॥"**

ಹಾರ್ಟ್ ಅಟ್ಯಾಕ್‌ಗೂ ಕೊಲೆಸ್ಟ್ರಾಲ್‌ಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ. ಕೊಲೆಸ್ಟ್ರಾಲ್ ಕಡಿಮೆ ಆದರೆ ಕ್ಯಾನ್ಸರ್, ಮಾನಸಿಕ ರೋಗ, ಆತ್ಮಹತ್ಯೆಗಳ ಸಾಧ್ಯತೆ ಹೆಚ್ಚುತ್ತದೆ. ಕೊಲೆಸ್ಟ್ರಾಲ್ ಕಡಿಮೆ ಆದರೇನೇ ಆರೋಗ್ಯ ಹಾಳು ! ಮಾತ್ರೆಗಳಿಂದ ಕೊಲೆಸ್ಟ್ರಾಲ್ ಪ್ರಮಾಣ ಕಡಿಮೆ ಮಾಡಲು ಪ್ರಯತ್ನಿಸಿದರೆ ಲಿವರ್ ಹಾಳಾಗುತ್ತದೆ. ಹಾರ್ಮೋನ್ಗಳ ಉತ್ಪತ್ತಿ ನಿಲ್ಲುತ್ತದೆ. ದೇಹದ ಕಣಗಳ ರಕ್ಷಾಕವಚ ಹಾಳಾಗುತ್ತದೆ. ಇದು ಡಯಾಬಿಟಿಸ್‌ಗೂ ಕಾರಣವಾಗುತ್ತದೆ. ಈ ಕಾರಣಕ್ಕಾಗಿಯೇ ಕೊಲೆಸ್ಟ್ರಾಲ್ ಔಷಧ ನೀಡಿದ ಬಳಿಕ ಆಗಾಗ ಲಿವರ್ ಪರೀಕ್ಷೆ ಕಡ್ಡಾಯ ಮಾಡುತ್ತಾರೆ.

ಕೆಲಸ ಮಾಡಲು ಲವಲವಿಕೆ ಇದ್ದರೆ ಸಾಕು, ಅದೇ ಆರೋಗ್ಯ. ಲವಲವಿಕೆ ಇಲ್ಲದಿದ್ದರೆ ಅನಾರೋಗ್ಯ. ಆರೋಗ್ಯಕ್ಕೆ ದೇಸೀ ಹಾಲು ಶ್ರೇಷ್ಠ, ಹಾಲಿಗಿಂತಲೂ ತುಪ್ಪ ಶ್ರೇಷ್ಠ. ನೀರು ಮತ್ತೂ ಒಳ್ಳೆಯದು.

ಅಂತಿಮವಾಗಿ ನೀವು ತಿಂದದ್ದು ನಿಮ್ಮನ್ನು ಕೊಲ್ಲುವುದಿಲ್ಲ, ನಿಮ್ಮ ತಲೆಯನ್ನು ತಿನ್ನುವುದೇ ನಿಮ್ಮನ್ನು ಕೊಲ್ಲುತ್ತದೆ. ನಮ್ಮಲ್ಲಿ ಹುಟ್ಟಿದ ದ್ವೇಷ, ಅಸೂಯೆ, ಕ್ರೋಧ ಮೊದಲಾದ ಚಿಂತನೆಗಳು ನಮ್ಮನ್ನು ಕೊಲ್ಲುತ್ತದೆ – ಎಚ್ಚರ, ಎಚ್ಚರ?

**ಬಿ.ಎಂ. ಹೆಗ್ಗಡೆ**
**ಸಂಗ್ರಹ – ಕುಂಜಿತ್ತಾಯ ರಾಘವೇಂದ್ರರಾವ್**

## ತುಳುವೆರೆಂಕ್ಲ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ವೈ.ಜಯಂತರಾವ್ ಆಯ್ಕೆ

ಬಳಗದ 2020–2022ನೇ ಸಾಲಿನ ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾಗಿರುವ, ಶ್ರೀ ವೈ.ಜಯಂತರಾವ್ ರವರು ಬೆಂಗಳೂರಿನ ತುಳುವರ ಸಂಘಟನೆಯಾದ ತುಳುವೆರೆಂಕ್ಲ ಸಂಸ್ಥೆಯ 2021–2023ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ದಿ. 21.3.2021 ರಂದು ನಡೆದ ಈ ಸಂಸ್ಥೆಯ ಸಭೆಯಲ್ಲಿ ಸರ್ವಾನುಮತದಿಂದ ಈ ಸಂಘಟನೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಶ್ರೀ ಜಯಂತರಾವ್‌ರವರ ಜನಪ್ರಿಯತೆ ಮತ್ತು ಸಂಘಟನಾ ಚತುರತೆಗೆ ಸಂದ ಗೌರವ ಅನ್ನಲೇಬೇಕು. ಶ್ರೀ ಜಯಂತರಾವ್ ಜೊತೆಗೆ ತುಳುವೆರೆಂಕ್ಲ ಕಾರ್ಯಕಾರಿ ಸಮಿತಿಯಲ್ಲಿ ಆನಂದ ಬಳಗದ ಶ್ರೀ ಪಿ.ಸಿ.ರಾವ್ ಉಪಾಧ್ಯಕ್ಷರಾಗಿ, ಶ್ರೀ ಗೋಪಾಲಕೃಷ್ಣ ಕೆ. ಉಪಪ್ರಧಾನ ಕಾರ್ಯದರ್ಶಿಯಾಗಿ, ಶ್ರೀ ನಾಗರಾಜ ಉಪಾಧ್ಯಾಯ ಟಿ.ಎಸ್. ಕಾರ್ಯದರ್ಶಿಯಾಗಿ ಹಾಗೂ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯರವರು ಕೋಶಾಧಿಕಾರಿಯಾಗಿ ಆಯ್ಕೆಯಾಗಿರುತ್ತಾರೆ. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಬಳಗದ ಡಾ.ಕೆ.ನ್. ಅಡಿಗ, ಶ್ರೀ ಹರಿದಾಸ ಎಸ್. ಉಪಾಧ್ಯ, ಶ್ರೀ ಮಟ್ಟಿ ರಾಮಚಂದ್ರ ರಾವ್‌ರವರು ನೇಮಕವಾಗಿರುತ್ತಾರೆ.



ದಿನಾಂಕ 10.4.2021 ರಂದು ನಡೆದ ಬಳಗದ ಕಾರ್ಯಕಾರಿ ಸಮಿತಿಯ ಸಭೆಯ ಸಂದರ್ಭದಲ್ಲಿ ತುಳುವೆರೆಂಕ್ಲ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಜಯಂತರಾವ್ ರವರಿಗೆ ಬಳಗದ ಅಧ್ಯಕ್ಷೆಯಾದ ಶ್ರೀಮತಿ ವಿಯಜಲಕ್ಷ್ಮಿ ಭಟ್ ರವರು ಹೂಗುಚ್ಚವನ್ನು ನೀಡಿ ಅಭಿನಂದಿಸಿರುತ್ತಾರೆ. ಶ್ರೀ ವೈ. ಜಯಂತರಾವ್ ಮತ್ತು ಅವರ ಕ್ರಿಯಾಶೀಲ ತಂಡಕ್ಕೆ ಬಳಗದ ಅಭಿನಂದನೆ ಮತ್ತು ಶುಭಾಶಯಗಳು.

# ಮಗಳೇ ನಿನಗೆ ವಂದನೆ ಅಭಿನಂದನೆ



ಕಳೆದ ವರ್ಷ ಸರ್ವವ್ಯಾಪ್ತಿ ವ್ಯಾದಿಯಾದ ಕೋವಿಡ್–19 ದಿಂದ ಜಗತ್ತೆಲ್ಲಾ ಭಯದಿಂದ ಜನಜೀವನ ಅಸ್ತವ್ಯಸ್ತಗೊಂಡಾಗ ಜಗತ್ತಿನಾದಂತ್ಯ ಮಹಿಳೆಯರು ಅತಿ ಮಹತ್ವದ ಪಾತ್ರವನ್ನು ವಹಿಸಿರುತ್ತಾರೆ. ತಾಯಿಯಾಗಿ, ಮಗಳಾಗಿ, ಸೊಸೆಯಾಗಿ, ವೈದ್ಯಳಾಗಿ, ಶುಶ್ರುಕಿಯಾಗಿ, ಆಶಾ ಕಾರ್ಯಕರ್ತೆಯಾಗಿ, ಶಿಕ್ಷಕಿಯಾಗಿ ಸ್ವಗ್ರಹಕ್ಕೂ, ಸಮಾಜಕ್ಕೂ ತನ್ನದೇ ಆದ ಕೌಶಲ್ಯದಿಂದ ಜಗತ್ತಿನ ಸೌಖ್ಯಕ್ಕೆ, ಪ್ರಗತಿಗೆ ನೆರವಾಗಿರುತ್ತಾಳೆ.

(ಕೋವಿಡ್ ಸಮಯದಲ್ಲಿ ಸಹಕರಿಸಿದ ಸಮಸ್ತ ಮಹಿಳೆಯರಿಗೆ ಸಮರ್ಪಣೆಯಾಗಿ ಶ್ರೀಮತಿ ವೀಣಾ ಭಟ್‌ರವರು ರಚಿಸಿರುವ ಈ ಕವನ ಸಕಾಲಿಕ –ಸಂ.)

– ವೀಣಾ ಭಟ್

ಮಗಳೇ ನೀನು ಮಹಿಳೆ ಮಾತ್ರವಲ್ಲಾ,
ನೀನೊಂದು ಅವಿರತದ ವಿಸ್ಮಯ
ನೀನಾರಿಗೆ ಸರಿಸಾಟಿ ಧರಿತ್ರಿಗೊ, ಸಾಗರಕ್ಕೊ ಅಥವಾ
ಆಗಸಕ್ಕೊ

ಧರೆಯೊಡಲ ಒಳಗಿರುವ ಜ್ವಾಲಾಮುಖಿ ನಿನಗಿಲ್ಲ
ಕ್ಷಮೆಯೆಂಬ ಸಂಗಾತಿ ಸದಾ ನಿನ್ನೊಳಗಿರಲು
ತಂದೆ ತಾಯಿಗೆ ಮಗಳಾಗಿ, ಅತ್ತೆ
ಮಾವಂದಿರಿಗೆ ಸೊಸೆಯಾಗಿ
ಒಲಿದವಗೆ ಸತಿಯಾಗಿ,
ಕಂದಮ್ಮಗಳಿಗೆ ತಾಯಿಯಾಗಿ
ಮುದ್ದು ನಾಯಿಗೊ, ಮೆತ್ತನೆಯ
ಬೆಕ್ಕಿಗೊ
ಮನೆಯಂಗಳದಿ ಅರಳಿರುವ
ಕುಸುಮಗಳಿಗೆ
ಉಣಬಡಿಸಿ, ನೀರುಣಿಸಿ ಕರ್ತವ್ಯ
ಬದ್ಧಳಾದೆ
ಮಗಳೇ ನೀನು ಮಹಿಳೆ
ಮಾತ್ರವಲ್ಲಾ,
ನೀನೂಂದು ಅವಿರತದ ವಿಸ್ಮಯ

ನೀನಾರಿಗೆ ಸರಿಸಾಟಿ ಧರಿತ್ರಿಗೊ,
ಸಾಗರಕ್ಕೊ ಅಥವಾ ಆಗಸಕ್ಕೊ
ಸಾಗರದಿ ಭೋರ್ಗರೆವ
ಆರ್ಭಟವು ನಿನಗಿಲ್ಲ
ಶಾಂತ ಅಂತರಾಳದಲ್ಲಿ
ಜೀವರಾಶಿಯ
ಹುದುಗಿಡುವ ಜಾಣೆ ನೀನು
ಜೀವ ಜೀವನವನ್ನು ಅರ್ಥೈಸಿ ಬದುಕಿಸುವ ಸೋಪಾನೆ
ನೀನು
ಮಮತೆಯಂಬ ಮುತ್ತು ರತ್ನಗಳ ಆಗರವು ನೀನು

ಆಳುಕಾಳುಗಳಿಗೆ, ಬೀದಿ ಬಾಗಿಲಲಿ ಮಾರಲು ಹೊರಟಿರುವ
ಜನಗಳಿಗೆ ಅಮ್ಮಳಾಗಿ, ಸಖಿ, ಸಹೋದರಿಯಾಗಿ,
ಸಲಹಾಗಾರ್ತಿಯಾಗಿ, ಮನೆ ಪಾಟದಲ್ಲಿ ಓದುವಾ ಮಕ್ಕಳಿಗೆ
ಅರಿವು ಕೊಡುವ ಶಿಕ್ಷಕಿಯಾಗಿ, ಮನೆಯೊಳ ಉಳಿದು
ದುಡಿಮೆಯಾ ಒತ್ತಡಕೆ ಓ ಕೊಟ್ಟು ಕಾರ್ಯ
ನಿರ್ವಾಹಕೆಯಾಗಿ
ಘನತೆ ಗೌರವಕೆ ಕುಂದು ಬರದಂತೆ ಬಾಳಿ ತೋರಿಸಿದ
ಧೀಮಂತೆ ನೀನು ಮಗಳೇ ನೀನು ಮಹಿಳೆ ಮಾತ್ರವಲ್ಲಾ,
ನೀನೊಂದು ಅವಿರತದ ವಿಸ್ಮಯ



ನೀನಾರಿಗೆ ಸರಿಸಾಟಿ ಧರಿತ್ರಿಗೊ,
ಸಾಗರಕ್ಕೊ ಅಥವಾ ಆಗಸಕ್ಕೊ
ಆಗಸದ ಬರಸಿಡಿಲು
ಗುಡುಗುಗಳ ಸದ್ದು ನಿನಗಿಲ್ಲ
ಆದರೂ ಆಗಸದ ಎತ್ತರಕೆ
ಹಾರಿರುವೆ ನೀನು
ಸ್ವಶಕ್ತಿಯಿಂದ ಮಿಂಚುವ ನಕ್ಷತ್ರೆ
ನೀನು
ಸೂರ್ಯ ಚಂದಿರರನ್ನು
ತೂಗಿಸುವ ತೊಟ್ಟಿಲು ನೀನು
ಕರಿಮುಗಿಲು ಬಂದಾಗ
ಮಳೆಹನಿಯ ಜಿನಿಗುಟಿಸಿ
ತಂಪಾಗಿಸುವ ಶಕ್ತಿಧಾತೆಯು
ನೀನು
ಹೆಣ್ಣೇ ನೀನು ಅರ್ಧ ಮಾತ್ರ
ಹೆಣ್ಣು,
ಇನ್ನರ್ಧ ಯಾರು ನೀನು ನಿನ್ನರ್ಧ
ಕಸುವಿನಲಿ
ಅಷ್ಟ ಭುಜಗಳ ಬಲತೋರಿ
ದುರ್ಗೆಯನು ನೆನಪಿಸಿದೆ
ಇನ್ನರ್ದೆಯಲಿ ನೀನು ಸಖಿಯೊ, ಸಮಾಲೋಚಕಳೊ
ಸರ್ವವ್ಯಾಪಿ ವ್ಯಾಧಿಯ ಭಯದಲ್ಲಿ ಜಗದ ಜನ ಹೆದರಿರಲು
ಎಲ್ಲೆಲ್ಲೂ ಮೌನ ಆವರಿಸಿರಲು ಧೃತಿಗೆಡದೆ ಮತಿಗೆಡದೆ
ಬದುಕೆಂಬ ತೋಟಕ್ಕೆ ಅಮೃತಧಾರೆಯನೆರೆದ ಧೀರೆ ನೀನು
ಮಗಳೇ ನೀನು ಮಹಿಳೆ ಮಾತ್ರವಲ್ಲಾ,
ನೀನೊಂದು ಅವಿರತದ ವಿಸ್ಮಯ




# "ಹಮಾರ PRO" ಪುಸ್ತಕ ಬಿಡುಗಡೆ

ನಮ್ಮ ಬಳಗದ ಹಿರಿಯ ಹಾಗೂ ಕ್ರಿಯಾಶೀಲ ಸದಸ್ಯರಾಗಿರುವ ಶ್ರೀ ಜಯ ಪ್ರಕಾಶ್‌ರಾವ್ ಕೆ. ರವರು ರಚಿಸಿರುವ "ಹಮಾರಾ PRO" ಪುಸ್ತಕ ಇತ್ತೀಚೆಗೆ ಬಿಡುಗಡೆಯಾಗಿದ್ದು, ಬಹಳಷ್ಟು ಬೇಡಿಕೆಯುಳ್ಳ ಕೃತಿಯಾಗಿ ಜನಪ್ರಿಯ ವಾಗುತ್ತಿದೆ. ಮೂಲತ ಪುತ್ತೂರಿನ ದರ್ಬೆಯವರಾದ ಶ್ರೀ ಜಯಪ್ರಕಾಶ್ ರಾವ್‌ರವರು ಸಿಂಡಿಕೇಟ್ ಬ್ಯಾಂಕಿನಲ್ಲಿ ವೃತ್ತಿಜೀವನ ಆರಂಭಿಸಿ, ಆನಂತರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (ಡಿ.ಆರ್.ಡಿ.ಓ) ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮ ವೈವಿಧ್ಯಮಯ ವೃತ್ತಿ ಅನುಭವಗಳನ್ನು ಈ ಕೃತಿಯಲ್ಲಿ ರಸವತ್ತಾಗಿ ದಾಖಲಿಸಿದ್ದಾರೆ.

ಡಿ.ಆರ್.ಡಿ.ಒ.ದಲ್ಲಿ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಮುಖ್ಯಸ್ಥರಾಗಿದ್ದಾಗ ಅವರ ಸಮನ್ವಯ ಹಾಗೂ ಶಿಷ್ಟಾಚಾರ ಅಧಿಕಾರಿಯಾಗಿ ಕೆಲಸ ಮಾಡುವ ಅದೃಷ್ಟ ಗಿಟ್ಟಿಸಿದ ಜಯಪ್ರಕಾಶ ರಾವ್‌ರವರು ಕಲಾಂ ಒಡನಾಟದ ಸುಂದರ ನೆನಪುಗಳನ್ನೂ ಈ ಪುಸ್ತಕದಲ್ಲಿ ಹಂಚಿಕೊಂಡಿದ್ದಾರೆ. ಕೆಲಸದ ಅವಧಿಯಲ್ಲಿ ಸಿಹಿ–ಕಹಿ ಎರಡೂ ರುಚಿಯನ್ನು ಆಸ್ವಾದಿಸಿದ್ದ ಲೇಖಕರು ವೃತ್ತಿಯ ಸವಾಲನ್ನು, ಮೇಲಧಿಕಾರಿಗಳ ಕೀಟಲೆಯನ್ನು ಎದುರಿಸಿ, ಮುನ್ನುಗ್ಗುವ ಛಾತಿಯನ್ನು ಪ್ರದರ್ಶಿಸಿದ್ದಾರೆ. ಈ ಪುಸ್ತಕ ಕೇವಲ ಹಳೆಯ ಅನುಭವಗಳ ವಿವರಣೆಯಲ್ಲದೆ ಎಲ್ಲ ಸಂದರ್ಭಗಳನ್ನೂ ಅವಕಾಶಗಳೆಂದೇ ಬಗೆದು ವೃತ್ತಿಯಲ್ಲಿ ಮುಂದುವರಿಯಬೇಕೆನ್ನುವವರಿಗೆ ಒಂದು ಪರೋಕ್ಷ ಮಾರ್ಗದರ್ಶಿಯಾಗಿದೆ. ಅಖಿಲ ಭಾರತ ಸಾರ್ವಜನಿಕ ಸಂಪರ್ಕ ಮಂಡಳಿಯ ದಕ್ಷಿಣ ಪ್ರಾಂತೀಯ ಅಧ್ಯಕ್ಷರಾಗಿದ್ದು, ಸಾರ್ವಜನಿಕ ಸಂಪರ್ಕ ಕ್ಷೇತ್ರದ್ದು ಅವಿರತವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ವೃತ್ತಿಯ ಜೊತೆಗೆ ಬರವಣಿಗೆಯ ಹವ್ಯಾಸವನ್ನು ಇರಿಸಿಕೊಂಡಿರುವ ನಮ್ಮ ಬಳಗದ ಶ್ರೀ ಜಯಪ್ರಕಾಶ ರಾವ್ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿದ್ದಾರೆ. ಅನೇಕ ಪ್ರಶಸ್ತಿ, ಸನ್ಮಾನಗಳಿಗೆ ಭಾಜನ ರಾಗಿರುವ ಶ್ರೀ ರಾವ್‌ರವರಿಗೆ ಬಳಗದ ಹಾರ್ದಿಕ ಅಭಿನಂದನೆಗಳು.



## ನ್ಯೂಜಿಲೆಂಡ್ ಕ್ರಿಕೆಟ್ ಟೀಮಿನಲ್ಲಿ ನಮ್ಮ ರಚಿನ್ ರವೀಂದ್ರ

ಬಳಗದ ಹಿರಿಯ ಸದಸ್ಯರಾದ ಶ್ರೀ ಟಿ.ಎ. ಬಾಲಕೃಷ್ಣ ಅಡಿಗ (ನಿವೃತ್ತ ಪ್ರಾಂಶುಪಾಲರು, ವಿಜಯ ಕಾಲೇಜು, ಬೆಂಗಳೂರು) ಮತ್ತು ಶ್ರೀಮತಿ ಪೂರ್ಣಿಮಾ ಅಡಿಗರವರ ಮೊಮ್ಮಗ ಶ್ರೀ ರಚಿನ್ ರವೀಂದ್ರರವರು ಮೇ ತಿಂಗಳಲ್ಲಿ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಲಿರುವ ನ್ಯೂಜಿಲೆಂಡ್ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವುದು ನಮಗೆಲ್ಲಾ ಹೆಮ್ಮೆಯ ಸಂಗತಿ. ಡಾ. ಬಾಲಕೃಷ್ಣ ಅಡಿಗ ದಂಪತಿಗಳ ಜ್ಯೇಷ್ಠಪುತ್ರಿ ಶ್ರೀಮತಿ ದೀಪಾ ಕೃಷ್ಣಮೂರ್ತಿ ಮತ್ತು ಶ್ರೀ ರವೀಂದ್ರ ಕೃಷ್ಣಮೂರ್ತಿ ದಂಪತಿಗಳ ಸುಪುತ್ರನಾಗಿರುವ ಶ್ರೀ ರಚಿನ್ ನವೆಂಬರ್ 1999ರಲ್ಲಿ ನ್ಯೂಜಿಲೆಂಡ್‌ನಲ್ಲಿ ಜನಿಸಿದ್ದು, ಬಾಲ್ಯದಿಂದಲೇ ತಂದೆಯ ಮಾರ್ಗದರ್ಶನದಲ್ಲಿ ಕ್ರಿಕೆಟ್ ಆಟದ ತರಬೇತಿ ಪಡೆಯುತ್ತಿದ್ದು, ತನ್ನ ಕಠಿಣ ಪರಿಶ್ರಮದಿಂದಾಗಿ ಉತ್ತಮ ಆಟಗಾರನಾಗಿ ರೂಪುಗೊಂಡಿದ್ದಾರೆ. ಅಂಡರ್–19 ತಂಡಕ್ಕೆ ಆಯ್ಕೆಯಾಗಿ ಎರಡು ವಿಶ್ವಕಪ್ ಪಂದ್ಯಗಳಲ್ಲಿ ನ್ಯೂಜಿಲೆಂಡ್ ದೇಶವನ್ನು ಪ್ರತಿನಿಧಿಸಿದ್ದರು. ಇತ್ತೀಚೆಗಷ್ಟೆ ಪ್ರವಾಸಿ ವೆಸ್ಟ್ ಇಂಡೀಸ್ ತಂಡದ ಎದುರು ಎರಡು ಶತಕಗಳನ್ನು ಬಾರಿಸಿದ್ದಲ್ಲದೆ, ಉತ್ತಮ ಬೌಲಿಂಗ್ ಪ್ರದರ್ಶನವನ್ನು ನೀಡಿದ್ದ ರಚಿನ್ ಇದೀಗ ನ್ಯೂಜಿಲೆಂಡ್ ತಂಡಕ್ಕೆ ಆಯ್ಕೆಯಾಗಿರುವ ಅತ್ಯಂತ ಕಿರಿಯ ಆಟಗಾರ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. 1996 ರಿಂದ ನ್ಯೂಜಿಲೆಂಡ್‌ನ ನಿವಾಸಿಗಳಾಗಿರುವ ಶ್ರೀಮತಿ ದೀಪಾರವರು 1990ರ ದಶಕದಲ್ಲಿ ಆನಂದ ಬಳಗದ ಹಲವಾರು ಕಾರ್ಯಕ್ರಮಗಳಲ್ಲಿ ನೃತ್ಯ ಪ್ರದರ್ಶನ ನೀಡಿ ತನ್ನ ಅಮೋಘ ಪ್ರತಿಭೆಯನ್ನು ಮೆರೆದಿದ್ದಾರೆ. ಕ್ರಿಕೆಟ್ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯವಿರುವ ಶ್ರೀ ರಚಿನ್ ರವೀಂದ್ರರವರಿಗೆ ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಅಕ್ಷಯ ಉಪಹಾರ್

ವಿ.ವಿ.ಐ. ರಸ್ತೆ , ಫೋರ್ಟ್
ಬೆಂಗಳೂರು 560 002
ಮೊಬೈಲ್ : 99724 29854



## ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*


At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ. : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

# ಸುದ್ಧಿ - ಸಂಗ್ರಹ

## ಭಕ್ತಿ ಪಂಥ – ಪುಸ್ತಕ ಬಿಡುಗಡೆ



ನಮ್ಮ ಬಳಗದ ಸಕ್ರಿಯ ಸದಸ್ಯರಾದ ಡಾ.ಕೆ. ನಾಗರಾಜ ತಂತ್ರಿ ರವರ ಪಿತಾಮಹರಾದ ದಿ. ಬಿ. ವೆಂಕಟಕೃಷ್ಣ ತಂತ್ರಿಯವರು ರಚಿಸಿರುವ "ಭಕ್ತಿಪಂಥ – ಅದರ ನಾನಾ ರೂಪಗಳು – ಒಂದು ಅವಲೋಕನ" ಈ ಪುಸ್ತಕದ ಬಿಡುಗಡೆ ದಿ. 14.2.2021 ರಂದು ಬೆಂಗಳೂರಿನ ಶ್ರೀ ಪುತ್ತಿಗೆ ಮಠದಲ್ಲಿ ನಡೆಯಿತು. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಬೈಲೂರಿನವರಾದ ದಿವಂಗತ ಶ್ರೀ ಬಿ. ವೆಂಕಟಕೃಷ್ಣ ತಂತ್ರಿಯವರು ಸಂಸ್ಕೃತ, ಹಿಂದಿ ಹಾಗೂ ಕನ್ನಡದ ಅಧ್ಯಾಪಕರಾಗಿ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯದಲ್ಲಿ ದೀರ್ಘಕಾಲ ಸಂಸ್ಕೃತ ಪ್ರಾಧ್ಯಾಪಕರಾಗಿ, ನಂತರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

ಸಂಸ್ಕೃತ, ಹಿಂದಿ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಳವಾದ ಜ್ಞಾನ ಹಾಗೂ ಅಪಾರವಾದ ಆಸಕ್ತಿ ಹೊಂದಿದ್ದ ಶ್ರೀ ತಂತ್ರಿಯವರು ಭಕ್ತಿ ಪಂಥ ಪುಸ್ತಕದಲ್ಲಿ ಭಕ್ತಿಯ ವಿವಿಧ ಮುಖಗಳು, ವಿಧಾನಗಳು, ಅರ್ಥಗಳು ಹಾಗೂ ದೇವರ ಮೇಲಿನ ಭಕ್ತಿ ಹಾಗೂ ರಾಷ್ಟ್ರದ ಮೇಲಿನ ಭಕ್ತಿಯ ಅನ್ಯೋನ್ಯ ಸಂಬಂಧ ಹಾಗೂ ಅವಿನಾಭಾವ ಅನಿವಾರ್ಯತೆ ಬಗ್ಗೆ ಮನೋಜ್ಞವಾಗಿ ಪ್ರಸ್ತಾಪಿಸಿದ್ದಾರೆ. ಕೆಲವಾರು ಘಟನೆ, ವ್ಯಕ್ತಿ, ಪ್ರಸಂಗಗಳ ಮೂಲಕ ಭಕ್ತಿಯ ವೈವಿಧ್ಯತೆ ಮತ್ತು ರೂಪವನ್ನು ವಿಶ್ಲೇಷಿಸಿದ್ದಾರೆ. ಸಾಮಾನ್ಯ ಓದುಗರಿಗೂ ಅರ್ಥವಾಗುವ ಶೈಲಿಯಲ್ಲಿ ವಿಷಯ ನಿರೂಪಣೆ ಮಾಡಲಾದ ಈ ಪುಸ್ತಕ ಜನಸಾಮಾನ್ಯರಿಗೂ ಉಪಯುಕ್ತವಾಗುವುದರಲ್ಲಿ ಸಂದೇಹ ಇಲ್ಲ ಎಂದು ಪುಸ್ತಕವನ್ನು ಬಿಡುಗಡೆ ಮಾಡಿದ ಕೆನರಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಜಿ.ಎನ್. ಭಟ್ ರವರು ಮುಕ್ತಕಂಠದಿಂದ ಕೃತಿಕರ್ತರ ಪರಿಶ್ರಮವನ್ನು ಕೊಂಡಾಡಿದ್ದಾರೆ. ಪುಸ್ತಕ ಬಿಡುಗಡೆ ಸರಳ ಸಮಾರಂಭದ ಅಧ್ಯಕ್ಷತೆಯನ್ನು ಡಾ. ನಾಗರಾಜ ತಂತ್ರಿಯವರು ವಹಿಸಿದ್ದು, ತಮ್ಮ ಅಧ್ಯಕ್ಷ ಭಾಷಣದಲ್ಲಿ ತಮ್ಮ ತಾತ ವೆಂಕಟಕೃಷ್ಣ ತಂತ್ರಿಯವರ ಜೀವನಾದರ್ಶಗಳನ್ನು ಸ್ಮರಿಸಿ ಅವರ ಬದುಕು ಈಗಿನ ಪೀಳಿಗೆಯವರಿಗೆ ಸ್ಫೂರ್ತಿ ನೀಡುವಂತಿದೆ ಎಂದು ಸ್ವಾರಸ್ಯಕರ ಮಾತುಗಳಲ್ಲಿ ವಿವರಿಸಿದರು. ಶ್ರೀ ವೆಂಕಟಕೃಷ್ಣ ತಂತ್ರಿಯವರು ಈ ಪುಸ್ತಕ ರಚನೆಯ ಪ್ರಕ್ರಿಯೆಯನ್ನು ಪೂರ್ತಿಗೊಳಿಸಿದ್ದರೂ, ಅದು ಮುದ್ರಣಗೊಳ್ಳುವ ಮೊದಲೇ ದಿವಂಗತರಾದರೂ, ಪುಸ್ತಕದ ಮುದ್ರಣ ಮತ್ತು ಬಿಡುಗಡೆಯ ಕಾರ್ಯವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಪ್ರಯತ್ನಿಸಿದ ಲೇಖಕರ ಪುತ್ರಿ ಡಾ.ಬಿ. ರೂಪಶ್ರೀ ತಂತ್ರಿಯವರ ಶ್ರಮ ಅಭಿನಂದನೀಯ.



## ಬ್ರಹ್ಮೋಪದೇಶ

ಬಳಗದ ಸಕ್ರಿಯ ಸದಸ್ಯರಾದ ಶ್ರೀ ಟಿ.ಆರ್. ಸದಾಶಿವ ಭಟ್ ಮತ್ತು ಶ್ರೀಮತಿ ವಿಜಯಾ ಭಟ್ ದಂಪತಿಗಳ ಮೊಮ್ಮಗ (ಶ್ರೀ ಕಾರ್ತಿಕ್ ಮತ್ತು ಶ್ರೀಮತಿ ಅರ್ಪಿತಾ ಕಾರ್ತಿಕ್ ದಂಪತಿಗಳ ಸುಪುತ್ರ.) ಚಿರಂಜೀವಿ ಅಕ್ಷಜ್‌ನ ಉಪನಯನವು ದಿ. 16.4.2021 ರಂದು ಪೂರ್ಣಪ್ರಜ್ಞ ವಿದ್ಯಾ ಪೀಠದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.


## ಓದುಗರ ಅನಿಸಿಕೆ...

* ಆನಂದ ಬಳಗದ ತ್ರೈಮಾಸಿಕ "ಭೃಗುವಾಣಿ" ಸುಂದರವಾಗಿ ಮೂಡಿಬರುತ್ತಿದೆ. ಬಳಗದ ಪ್ರತಿಭಾವಂತ ಕಲಾವಿದರ ಕಲಾ ಪ್ರದರ್ಶನಕ್ಕೆ ಬಳಗದ ವತಿಯಿಂದ ಸೂಕ್ತ ವೇದಿಕೆ ಇರುವ ಹಾಗೆ, ಸಾಹಿತ್ಯಾಸಕ್ತ ಬರಹಗಾರರಿಗೂ ಬಳಗದ ವತಿಯಿಂದ ಒಂದು ವೇದಿಕೆ ಲಭ್ಯವಾಗಲಿ ಎಂದು ನಮ್ಮ ಆಶಯ. ಆರಂಭಿಕವಾಗಿ ಚಿತ್ರ, ಕವನ ಸ್ಪರ್ಧೆ", ಹಾಗೂ ಸೂಚಿತ ವಿಷಯದ ಕುರಿತಾದ "ಕಥಾ ಸ್ಪರ್ಧೆ" ಏರ್ಪಡಿಸಿ, ಆಯ್ಕೆಯಾದ ಉತ್ತಮ ಸಾಹಿತ್ಯವನ್ನು "ಭೃಗುವಾಣಿ"ಯಲ್ಲಿ ಪ್ರಕಟಿಸುವ ನಿಟ್ಟಿನಲ್ಲಿ ಒಂದು ಪ್ರಯತ್ನ ಬಳಗದ ವತಿಯಿಂದ ಮೂಡಿ ಬರಲಿ ಎಂದು ನಮ್ಮ ಕೋರಿಕೆ.

– ಸುಜಾತ ರಮೇಶ್

# ಭಾವಪೂರ್ಣ ಶ್ರದ್ಧಾಂಜಲಿ

## ಎಚ್.ಎ.ಕೆ. ರಾವ್



ನಮ್ಮ ನಾಡಿನ ಪ್ರಖ್ಯಾತ ಲೆಕ್ಕಪರಿಶೋಧಕರಾಗಿದ್ದ ಶ್ರೀ ಹೆಚ್.ಎ.ಕೆ. ರಾವ್‌ರವರು ದಿನಾಂಕ 3.4.2021 ರಂದು ದೈವಾಧೀನರಾಗಿದ್ದಾರೆ. ಬೆಂಗಳೂರು, ಉಡುಪಿ ಮತ್ತು ಕಾಂಜಗಾಡ್‌ನಲ್ಲಿರುವ ರಾವ್ ಮತ್ತು ಸ್ವಾಮಿ ಚಾರ್ಟಡ್ ಎಕೌಂಟೆಂಟ್ ಸಂಸ್ಥೆಯ ಸಂಸ್ಥಾಪಕ ಪಾಲುದಾರರಾಗಿದ್ದ ಶ್ರೀ ರಾವ್‌ರವರು ಐ.ಸಿ.ಎ.ಐ.ನ ರೀಜನಲ್ ಕೌನ್ಸಿಲ್ ಮತ್ತು ಸೆಂಟ್ರಲ್ ಕೌನ್ಸಿಲ್‌ನ ಸದಸ್ಯರಾಗಿ ಸಮರ್ಥ ಸೇವೆ ಸಲ್ಲಿಸಿದ ಮೇಧಾವಿ ಲೆಕ್ಕ ಪರಿಶೋಧಕರು. 1952ರಲ್ಲಿ ತನ್ನ ವೃತ್ತಿ ಜೀವನಕ್ಕೆ ಪ್ರವೇಶಿಸಿದ ಶ್ರೀಯುತರು ತನ್ನ 69 ವರ್ಷಗಳ ಕಾಲದ ಸುದೀರ್ಘ ವೃತ್ತಿಕ್ಷೇತ್ರದಲ್ಲಿ ಡೈರೆಕ್ಟ್ ಮತ್ತು ವಾಣಿಜ್ಯ ತೆರಿಗೆಗಳ ಅಕೌಂಟಿಂಗ್ ಮತ್ತು ಆಡಿಟಿಂಗ್ ವಿಚಾರದಲ್ಲಿ ಆಳವಾದ ಪರಿಜ್ಞಾನ ಮತ್ತು ಅನುಭವ ಗಳಿಸಿದ್ದು, ಕಾನೂನು ಮತ್ತು ಟ್ಯಾಕ್ಸೇಷನ್ ವಿಚಾರದಲ್ಲಿ ಸಲಹೆ ನೀಡುವ ಅತ್ಯಂತ ಬೇಡಿಕೆಯ ಪರಿಣತರಾಗಿದ್ದರು. ನೇರ ತೆರಿಗೆ ಮತ್ತು ವಾಣಿಜ್ಯ ತೆರಿಗೆಗೆ ಸಂಬಂಧ ಪಟ್ಟ ಹಲವಾರು ಟ್ರಿಬ್ಯೂನಲ್‌ಗಳಲ್ಲಿ ಪ್ರತಿನಿಧಿಸಿದ್ದಲ್ಲದೆ, ನ್ಯಾಯಾಲಯದ ಕೋರ್ಟ್ ಕಮಿಷನರ್ ಆಗಿ ಹಾಗೂ ಆದಾಯತೆರಿಗೆ ಇಲಾಖೆಯ ಸ್ಪೆಷಲ್ ಆಡಿಟರ್ ಆಗಿ ಸಮರ್ಪಕ ಸೇವೆ ಸಲ್ಲಿಸಿರುತ್ತಾರೆ. ಆನಂದ ಬಳಗದ ಹಿತೈಷಿ ಹಾಗೂ ಪೋಷಕರಾಗಿದ್ದ ಶ್ರೀ ಹೆಚ್.ಎ.ಕೆ. ರಾವ್ ಬಳಗದ ಲೆಕ್ಕಪರಿಶೋಧಕರಾಗಿ ಹಲವಾರು ವರ್ಷಗಳ ಕಾಲ ಉಚಿತವಾಗಿ ಸೇವೆ ಸಲ್ಲಿಸಿದ್ದು, ಬಳಗದ ಪ್ರಾರಂಭಿಕ ಬೆಳವಣಿಗೆಯಲ್ಲಿ ಗಣನೀಯ ಕೊಡುಗೆ ನೀಡಿರುತ್ತಾರೆ. ಶ್ರೀ ರಾವ್‌ರವರ ನಿಧನಕ್ಕೆ ಬಳಗದ ಶ್ರದ್ಧಾಂಜಲಿ.

## ಶಶಿಪ್ರಭಾ ಹಿರೇಮಠ್



ಬಳಗದ ಸದಸ್ಯೆಯಾಗಿದ್ದ ಶ್ರೀಮತಿ ಶಶಿಪ್ರಭಾ ಹಿರೇಮಠ್ ರವರು ದಿ. 11.3.2021 ರಂದು ನಿಧನರಾಗಿದ್ದಾರೆ. ಹಿರಿಯ ಪತ್ರಕರ್ತೆಯಾಗಿದ್ದ ಶ್ರೀಮತಿ ಶಶಿಪ್ರಭಾ ಲೋಕವಾಣಿ, ಈ ಸಂಜೆ, ಸಂಯುಕ್ತ ಕರ್ನಾಟಕ ಹಾಗೂ ಸಂಜೆ ವಾಣಿಯಲ್ಲಿ ಸೇವೆ ಸಲ್ಲಿದ್ದರು. ಆಕಾಶವಾಣಿ, ಬೆಂಗಳೂರು ದೂರದರ್ಶನ, ಸಿಟಿ ಕೇಬಲ್ ಮುಂತಾದ ಚಾನಲ್‌ಗಳಲ್ಲೂ ನಿರೂಪಕಿಯಾಗಿ ಜನಪ್ರಿಯತೆ ಗಳಿಸಿದ್ದ ಶ್ರೀ ಶಶಿಪ್ರಭಾ ಹಿರೇಮಠ್‌ರವರಿಗೆ ಬಳಗದ ಶ್ರದ್ಧಾಂಜಲಿ.

## ಯು.ಬಿ. ಭಟ್



ಬಳಗದ ಹಿರಿಯ ಸದಸ್ಯರು ಹಾಗೂ ಹಿತೈಷಿಗಳಾಗಿದ್ದು ಶ್ರೀ ಯು.ಬಿ. ಭಟ್‌ರವರು ದಿನಾಂಕ 19.4.2021 ರಂದು ದೈವಾಧೀನರಾಗಿರುತ್ತಾರೆ. ಆಗಿನ ಕೆ.ಆರ್.ಇ.ಸಿ.ಯಲ್ಲಿ ಇಂಜಿನಿಯರಿಂಗ್ ಪದವಿ ನಂತರ ಅಹಮ್ಮದಾಬಾದ್ ಐ.ಐ.ಎಂ. ನಿಂದ ಎಂ.ಬಿ.ಎ. ಪದವಿ ಗಳಿಸಿದ ಶ್ರೀ ಭಟ್‌ರವರು ಯು.ಬಿ. ಗ್ರೂಪ್‌ನಲ್ಲಿ ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಆನಂತರ ತನ್ನ ಸ್ವಂತ ಮಾರ್ಕೆಟಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಸಂಸ್ಥೆಯನ್ನು ನಿರ್ವಹಿಸುತ್ತಿದ್ದರು. ಯಶಸ್ವಿ ಉದ್ಯಮಶೀಲರಾಗಿದ್ದ ಶ್ರೀ ಯು.ಬಿ. ಭಟ್‌ರವರು ದಿನಾಂಕ 24.12.1999 ರಂದು ತಾಲಿಬಾನ್ ಉಗ್ರರು ಅಪಹರಿಸಿ, ಕಂದಹಾರ್‌ನಲ್ಲಿ ಸೆರೆ ಹಿಡಿದಿದ್ದ ವಿಮಾನ ಅಪಹರಣ ಪ್ರಕರಣದಲ್ಲಿ ಯಾತನೆ ಅನುಭವಿಸಿದ ರಾಜ್ಯದ ಇಬ್ಬರು ಪ್ರಯಾಣಿಕರಲ್ಲಿ ಒಬ್ಬರಾಗಿ ಸುದ್ದಿಯಲ್ಲಿದ್ದರು. ಆನಂತರ ತನ್ನ ಭಯಾನಕ ಅನುಭವವನ್ನು ಟೆರರ್ ಆನ್ ಬೋರ್ಡ್ ಎಂಬ ಪುಸ್ತಕದ ಮೂಲಕ ದಾಖಲಿಸಿದ್ದಾರೆ. ಶ್ರೀ ಯು.ಬಿ. ಭಟ್‌ರವರಿಗೆ ಬಳಗದ ಶ್ರದ್ಧಾಂಜಲಿ.







**Available at all Ayurvedic Medical Stores**

BPRL

Manufactured by
**Bangalore Pharmaceutical & Research Laboratory (P) Ltd.**
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhrugu Vani Kannada-Tulu-English Quarterly KARKAN2012/45587 Bengaluru, Jan-Mar 2021 No. of Pages : 28 (24+4)




If undelivered please return to:

**Ananda Balaga**

Hotel Ajantha Complex, 22A, M.G. Road

Bengaluru - 560 001

Phone : 2559 4457

Bhrugu Vani - Printed & Published by P.S. Bagilthaya, on behalf of Ananda Balaga, Printed at Omkar Offset Printers, 3/3, 1st Main Road, New Tharagupet, Bengaluru - 560 002. Published at Ananda Balaga. Hotel Ajantha Complex, 22A, M.G.Road, Bengaluru - 560001. Editor : Sri M.Sathyanarayana Bhat